7. ಮುಖ್ಯಮಂತ್ರಿಗಳ ಹೇಳಿಕೆ

ಬೆಂಗಳೂರು ನಗರದಲ್ಲಿ ಕೆಲವು ಕಡೆ ಬಾಂಬ್ ಸ್ಫೋಟದ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ. ಈಗ ಬಂದಿರುವಂತಹ ಪ್ರಥಮ ಮಾಹಿತಿ. ಆನೆಪಾಳ್ಯ ಆಡುಗೋಡಿ. ಮಡಿವಾಳದಲ್ಲಿ 3 ಕಡೆ ಸ್ಫೋಟವಾಗಿದೆ. ಮಡಿವಾಳದಲ್ಲಿ ಒಬ್ಬ ಮಹಿಳೆ ಮೃತವಾಗಿದ್ದಾರೆ. ಆನೇಪಾಳ್ಯದಲ್ಲಿ ಇಬ್ಬರಿಗೆ ಗಾಯವಾಗಿದೆ. ಆಡುಗೊಡಿಯಲ್ಲಿ ಒಬ್ಬರಿಗೆ ಗಾಯವಾಗಿದೆ. ನಮ್ಮ I.G.P. Intel ligence. ಅಲ್ಲಿ spotನಲ್ಲಿದ್ದಾರೆ. ಇಲ್ಲಿಗೆ ಬಂದಿರುವಂತಹ ಪ್ರಥಮ ಮಾಹಿತಿಯನ್ನು ಹೇಳುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಒಂದೇ ಕಡೇ blast ಆಗಿದೆಯಾ ಅಥವಾ 3–4 ಕಡೆ ಆಗಿದೆಯಾ?

ಶ್ರೀ ಬಿ.ಎಸ್. ಯಡಿಯೂರಪ್ಪ : 3 ಕಡೆ ಆಗಿದೆ. ಈಗ ಬಂದಿರುವ ಪ್ರಥಮ ಮಾಹಿತಿಯಿಂದ ಹೇಳುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ : Death ಎಷ್ಟು ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : Death ಒಂದು ಆಗಿದೆ. ನಮಗೆ ಈಗಿರುವಂತಹ informationನ್ನು ನಿಮಗೆ ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ ರೇವಣ್ಣ ; ನಿನ್ನೆ ದಿನ ಮಾನ್ಯ ಮುನಿಯಪ್ಪನವರು ಹಾಲಿಗೆ 2.00 ರೂಪಾಯಿಗಳನ್ನು ಸಹಾಯಧನವನ್ನು ಕೊಡುತ್ತಿರುವುದು ಸಂತೋಷ ಏಕೆಂದರೆ ರಾಜ್ಯದಲ್ಲಿ 13 ಜಿಲ್ಲಾ ಒಕ್ಕೂಟದಲ್ಲಿ 9500 ಜನ ಸದಸ್ಯರುಗಳು ಇದ್ದಾರೆ. ಇದು 19 ಲಕ್ಷ ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಾಗುತ್ತದೆ. ಕೆಎಂಎಫ್‌ಗೆ 10 ಪೈಸೆಯನ್ನು ಕೊಡಿ ಎಂದು ನಾವು ಯಾರು ಕೇಳಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳಿಗೂ ಒಂದು ಏನು ಈ scheme ಮಾಡುವಂತಹ ಸಂದರ್ಭದಲ್ಲಿ ಪೂರ್ಣ ವಿವರವಾದಂತಹ ಒಂದು ಪತ್ರವನ್ನು ಸಹ ಬರೆದಿದ್ದೇನೆ. ಆ ಪತ್ರದ ಮುಖೇನ ಪೂರ್ಣವಾಗಿ ತಿಳಿಸಿದ್ದೇನೆ. ಇವತ್ತು ರಾಜ್ಯದಲ್ಲಿ 32 ಲಕ್ಷ ಲೀಟರ್ ಹಾಲು ಬರುತ್ತಿದೆ. ನಮ್ಮ ಕೆಎಂಎಫ್‌ಗೆ 10 ರೂ. ಕೊಡಿ. 5 ಪೈಸೆ ಕೊಡಿ ಎಂದು ನಾವು ಕೇಳಿಲ್ಲ. ಇವತ್ತು ಡೀಸೆಲ್ ಮತ್ತು ಪೆಟ್ರೋಲ್ ಎಲ್ಲವೂ ಜಾಸ್ತಿಯಾದರೂ ಕೂಡ ನಾವು ಏನು ಮಾಡುವುದಕ್ಕೂ ಕೂಡ ಹೋಗಿಲ್ಲ. ಇನ್ನು 10–15 ಲಕ್ಷ ಲೀಟರ್ ಹಾಲು ಹೆಚ್ಚಿಗೆ ಬರಬಹುದು. ಅದಕ್ಕಾಗಿ ಏನು ಮೂಲಭೂತವಾಗಿ ಬೇಕಾಗುತ್ತದೆಯೋ

ಅದನ್ನು ಮಾಡಿಕೊಡಿ ಎಂದು ಕೇಳಿದ್ದೇನೆ. ಅದನ್ನು ನಾವು ಎಲ್ಲಿಂದಲೂ ತರುವುದಕ್ಕಾಗುವುದಿಲ್ಲ. ಅಷ್ಟನ್ನು ಹೇಳಿದ್ದೇವೆಯೇ ಹೊರತು ಬೇರೆ ಉದ್ದೇಶವಿಲ್ಲ. ನಮಗೆ ಬೇಡ. ನೇರವಾಗಿ ರೈತನಿಗೆ ಕೊಡಿ ಎಂದು ಬರವಣಿಗೆಯಲ್ಲಿ ಹೇಳಿದ್ದೇವೆ. ಅದರಲ್ಲಿ ನಮಗೇನು ಒಂದು ರೂಪಾಯಿ ಬೇಡ ಎಂಬ ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ನಾವು ಮುಂದಿನ ದಿನಗಳಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ನಾನು ಎಲ್ಲವನ್ನು ಪತ್ರದಲ್ಲಿ ಬರೆದಿದ್ದೇನೆ. ನಾನು ಕೆಎಂಎಫ್‌ನ ಪರವಾಗಿ ಹೇಳುವಂತಹದ್ದು. ಇವತ್ತು ಪಶು ಸಂಗೋಪನಾ ಇಲಾಖೆ ಇರಬಹುದು. ಇಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ. ಏಕೆಂದರೆ ಸುಮಾರು ಒಂದು ಸಾವಿರ ಡಾಕ್ಟರ್ ಹುದ್ದೆಗಳು ಖಾಲಿ ಇವೆ. ನಾವು ಇವತ್ತು ತಮಿಳುನಾಡಿನಿಂದ ಡಾಕ್ಟರ್‌ಗಳನ್ನು ಕರೆಸುವಂತಹ ಪರಿಸ್ಥಿತಿ ಬಂದಿದೆ. ಎಲ್ಲಿ ಕಾಲ್ ಮಾಡಿದರೂ ಕೂಡ ಇಲ್ಲ. ನಮ್ಮಲ್ಲಿ ಇವತ್ತು 3–4 ಕಾಲೇಜುಗಳು ಇವೆ. ಬೀದರ್. ಶಿವಮೊಗ್ಗ. ಬೆಂಗಳೂರು ಹಾಗೂ ಹಾಸನ ಒಟ್ಟು 4 ಕಾಲೇಜುಗಳೂ ಇವೆ. 4 ಕಾಲೇಜುಗಳಿಗೆ ಕನಿಷ್ಟ ಒಂದು ವರ್ಷಕ್ಕೆ 100–100 ಡಾಕ್ಟರ್‌ಗಳನ್ನು ನೇಮಕ ಮಾಡುವ ಬಗ್ಗೆ ಸರ್ಕಾರ ಗಮನವನ್ನು ಹರಿಸಬೇಕು. ಒಂದು ಸಾವಿರ ಡಾಕ್ಟರ್ ಹುದ್ದೆಗಳು ಖಾಲಿ ಇವೆ. ಇವತ್ತು ಒಂದಕ್ಕೆ ಎರಡು ಪಟ್ಟು ಕೊಡುತ್ತೇವೆಂದರೂ ಯಾರೂ ಕೂಡ ಬರುತ್ತಿಲ್ಲ. ಪಶುಸಂಗೋಪನಾ ಇಲಾಖೆಗೆ ಬೇಕಾದಂತಹ ಕೆಲವು ಡಾಕ್ಟರ್‌ಗಳನ್ನು. ಸುಮಾರು 3000 ಸಹಾಯಕರುಗಳ ಹುದ್ದೆಗಳು ಸಹ ಖಾಲಿ ಇವೆ. ಅದನ್ನು ತಾವು ಯಾವಾಗ ತುಂಬುತ್ತೀರಿ. 5 ಸಾವಿರ ಹುದ್ದೆಗಳನ್ನು ಆರೋಗ್ಯ ಇಲಾಖೆಯ ಮುಖಾಂತರ ತುಂಬುತ್ತಿದ್ದೀರಿ. ಆದರೆ ಇದರಲ್ಲಿ ಒಂದೇ ಒಂದು ಹುದ್ದೆಯನ್ನು ತುಂಬುತ್ತೇವೆಂಬ ಭಾವನೆಯನ್ನು ವ್ಯಕ್ತಪಡಿಸಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಹೇಳಬೇಕು. ಪಶುಸಂಗೋಪನಾ ಇಲಾಖೆಯಲ್ಲಿ ಯಾವ ಯಾವ ಹುದ್ದೆಗಳು ಖಾಲಿ ಇವೆ. ಬೇಕಾದಂತಹ ಹುದ್ದೆಗಳನ್ನು ಮಾತ್ರ ಇವತ್ತು ತುಂಬಲಿ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಪಶುಸಂಗೋಪನಾ ಮಂತ್ರಿಗಳನ್ನು ಇವತ್ತು ಒತ್ತಾಯ ಮಾಡುತ್ತಿದ್ದೇನೆ. ನಮ್ಮ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಬಗ್ಗೆ ಹೇಳಬೇಕಾದರೆ..

ಅಧ್ಯಕ್ಷರು : ಮಾನ್ಯ ರೇವಣ್ಣನವರೆ ಎಲ್ಲವನ್ನು ಕವರ್ ಮಾಡಿ ಆಯಿತಲ್ಲವೇ?

ಶ್ರೀ ಹೆಚ್.ಡಿ. ರೇವಣ್ಣ ; ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದ ಬಗ್ಗೆ ಹೇಳಬೇಕಾಗುತ್ತದೆ. ಏಕೆಂದರೆ..

ಅಧ್ಯಕ್ಷರು : ಸೋಮವಾರ ಬಿಟ್ಟರೆ ತಾವು ಒಂದು ತಾಸು ಮಾತನಾಡುತ್ತೀರಿ. ಅದಕ್ಕಾಗಿ ತಾವು ಇವತ್ತು ಮುಗಿಸಿಬಿಡಿ.

ಶ್ರೀ ಹೆಚ್.ಡಿ ರೇವಣ್ಣ ; ನಮ್ಮನ್ನು ತಾವು ಅಗಾಗ್ಗೆ ದಾರಿ ತಪ್ಪಿಸುತ್ತಿದ್ದೀರಲ್ಲಾ? ಏನು ಮಾಡೋಣ ಹೇಳಿ. ನಮಗೆ ಮಾತನಾಡುವುದಕ್ಕೆ ಬಿಡುವುದಿಲ್ಲ. ದಾರಿ ತಪ್ಪಿಸುತ್ತಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಕುಮಾರಸ್ವಾಮಿಯವರ ಸಂಪುಟದಲ್ಲಿ ತಾವು PWD ಮಂತ್ರಿಗಳಾಗಿದ್ದೀರಿ. ಶಿಕ್ಷಣಕ್ಕೂ ನಿನಗೂ ಸಂಬಂಧವೇನಣ್ಣ ?

ಶ್ರೀ ಹೆಚ್.ಸಿ. ಬಾಲಕೃಷ್ಣ : ಅದನ್ನು ಅವರೇ ಮಾಡಿರುವುದು.

ಶ್ರೀ ಹೆಚ್.ಡಿ. ರೇವಣ್ಣ ; ನಾನೇ ಮಾಡಿರುವುದು ಎಂದು ತಿಳಿದುಕೊಳ್ಳಿ. ಅದನ್ನು ಆಮೇಲೆ ಹೇಳೋಣ. ಅದನ್ನು ಒಪ್ಪಿಕೊಳ್ಳೋಣ. ನಾನೇ ಮಾಡಿದ್ದೇನೆಂದು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ನಾನು ಒಂದು ನಿಮಿಷ ಹೇಳುತ್ತೇನೆ. ಹಿಂದುಳಿದ ವರ್ಗದ ಬಗ್ಗೆ ಮಾತನಾಡಿ ನಂತರ ಶಿಕ್ಷಣದ ಬಗ್ಗೆ ಮಾತನಾಡುತ್ತೇನೆ. ಶಿಕ್ಷಣದ ಬಗ್ಗೇ ಹೇಳುತ್ತೇನೆ. ಮಾಹಿತಿ ಇಲ್ಲಿ ಸಿಗುತ್ತಿಲ್ಲ. 93 ರಿಂದ 94 ರವರೆಗೆ ಏನು ಖಾಸಗಿ ಪ್ರೌಢಶಾಲೆಗಳಿಗೆ ಇವತ್ತು ಅನುದಾನವನ್ನು ಕೊಡುವುದಕ್ಕೆ ಹೊರಟ್ಟಿದ್ದೀರಿ. ಅದಕ್ಕೆ ಅರ್ಜೆಂಟ್ ಏನಿತ್ತು? ಇವತ್ತು ಅರ್ಜೆಂಟ್ ಇರುವ ಕಾರ್ಯಕ್ರಮವೇನು. 1993 ರಿಂದ 1994 ರವರೆಗೆ ಖಾಸಗಿಯಾಗಿ ಪ್ರೌಢ ಶಾಲೆ ಮಾಡುವವರಿಗೆ ನೀವು ಅನುದಾನ ಕೊಡಲು ಹೊರಟ್ಟಿದ್ದೀರಲ್ಲಾ. ಇದರ ಉದ್ದೇಶವೇನು? ಹಳ್ಳಿಯಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳ ಬಾಗಿಲು ಮುಚ್ಚುವುದು. ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದುವವರು ಯಾರು? ಬಡವರ ಮಕ್ಕಳು. ಖಾಸಗಿ ಪ್ರೌಢ ಶಾಲೆಯಲ್ಲಿ ಓದುವವರು ಯಾರು? ಆದ್ದರಿಂದ ಖಾಸಗಿ ಪ್ರೌಢ ಶಾಲೆಗಳಲ್ಲಿ ಒಂದು ಸೀಟಿಗೆ ಎಷ್ಟು ಡೊನೇಷನ್ ತೆಗೆದುಕೊಳ್ಳುತ್ತೀರಿ? 5 ರಿಂದ 40 ಸಾವಿರದವರೆಗೆ ಡೊನೇಷನ್ ತೆಗೆದುಕೊಂಡು ಅಂಥವರಿಗೆ ಪ್ರೋತ್ಸಾಹ ಕೊಡಲು ಹೊರಟರೆ ಹೇಗೆ? ಅದಕ್ಕಾಗಿ 140 ಕೋಟಿ ಹಣ ಇಟ್ಟಿರುವುದಾಗಿ ಹೇಳುತ್ತೀರಿ. ಇವತ್ತು ಉದಾಹರಣೆಗೆ ಹೇಳುವುದಾದರೆ. ನನ್ನ ತಾಲ್ಲೂಕಿನಲ್ಲೇ ಜೂನಿಯರ್ ಕಾಲೇಜನ್ನು ಕೊಟ್ಟಿದ್ದೀರಿ. ಒಬ್ಬ ಅಟೆಂಡರ್ ಮತ್ತು 50 ಜನ ಹುಡುಗರು ಇದ್ದಾರೆ. 80 ಜನ ಹುಡುಗರು ಇದ್ದರೆ ಒಬ್ಬ ಅಟೆಂಡರ್ ಮತ್ತು ಒಬ್ಬ ಹೈಸ್ಕೂಲ್ ಮಾಸ್ಟರ್ ಇದ್ದಾರೆ. ಬಾಕಿ ಹುದ್ದೆಯೆಲ್ಲಾ ಖಾಲಿ. ಫಸ್ಟ್ ಏಡ್ ಕಾಲೇಜಿನಲ್ಲೂ ಅದೇ ಪರಿಸ್ಥಿತಿ. ನಾವು ಹೋದ ಸಲ ನಬಾರ್ಡನಿಂದ ಹಣವನ್ನು ಕೊಟ್ಟೆವು. ಆ ರೀತಿ ಕೊಟ್ಟಿರುವ ಹಣದಲ್ಲಿ ಇವತ್ತಿನವರೆಗೆ

ಪ್ರೌಢ ಶಾಲೆಯನ್ನು ಜೂನಿಯರ್ ಕಾಲೇಜನ್ನು. ಪ್ರಥಮ ದರ್ಜೆ ಕಾಲೇಜಿನ ಕಟ್ಟಡವನ್ನು ಪ್ರಾರಂಭ ಮಾಡಲು ಆಗಿಲ್ಲ. ಇವತ್ತು ಲ್ಯಾಂಡ್ ಆರ್ಮಿಗೆ ಕೊಡಲು ತೀರ್ಮಾನ ಮಾಡಿದ್ದಾರೆ. ಯಾರಿಗಾದರೂ ಇಟ್ಟುಕೊಳ್ಳಿ. ಜಿಲ್ಲಾ ಪರಿಷತ್ತಿಗಾದರೂ. ಲ್ಯಾಂಡ್ ಆರ್ಮಿಗಾದರೂ. ಯಾರಿಗಾದರೂ ಕೊಡಿ. ಆದರೆ ಆ ಕೆಲಸವನ್ನು ಮಾಡಲು ಎಷ್ಟು ದಿವಸ ಬೇಕು ಹೇಳಿ? ಇವತ್ತು ಕಟ್ಟಡ ಇಲ್ಲದೇ ಹೊರಗೆ ಮರದ ಕೆಳಗೆ ಪಾಠ ಮಾಡುವ ಸ್ಥಿತಿ ಬಂದಿದೆ. ಇದರ ಬಗ್ಗೆ ಚಿಂತನೆ ಇಲ್ಲ. ಇವತ್ತು ಹಳ್ಳಿಯಲ್ಲಿ 7ನೇ 8ನೇ ತರಗತಿಗಳಲ್ಲಿ ಶಿಕ್ಷಕರು ಇಲ್ಲ ಎಂದು ಬಾಗಿಲು ಮುಚ್ಚುವ ಸ್ಥಿತಿ ಬಂದಿದೆ. ನೀವು ಸರ್ಕಾರಿ ಕಾಲೇಜುಗಳ ಬಾಗಿಲು ಮುಚ್ಚಿಸುವುದು. ಖಾಸಗಿ ಕಾಲೇಜುಗಳಿಗೆಲ್ಲ ಒತ್ತುಕೊಟ್ಟು ಅವರು ನಮ್ಮ ಗ್ರಾಮೀಣ ಪ್ರದೇಶದ ರೈತರ ಮಕ್ಕಳಿಗೆ 5 ರೂಪಾಯಿ ಇರುವ ಫೀಯನ್ನು 500 ರೂಪಾಯಿ ಮಾಡುವುದು. ಡೊನೇಷನ್ ತೆಗೆದುಕೊಳ್ಳುವುದು. ನಿಮಗೆ ಖಾಸಗಿಯವರಿಗೆ ಒತ್ತುಕೊಡುವುದು ಇದೆಯೋ ಅಥವಾ ಸರ್ಕಾರದ ಶಾಲೆಗಳಿಗೆ ಒತ್ತುಕೊಡಬೇಕೆಂಬುದು ಇದೆಯೋ ಎಂಬ ಬಗ್ಗೆ ದಯಮಾಡಿ ತಿಳಿಸಬೇಕು. ಬೈಸಿಕಲ್ ತೆಗೆದುಕೊಂಡಿರುವುದೆಲ್ಲ ಈಗ ಮುರಿದುಹೋಗಿದೆ. ನೀವು ಕೊಟ್ಟಿರುವ ಬೈಸಿಕಲ್ ಆರು ತಿಂಗಳಿಗೆ ಒಂದೊಂದು ಮುರಿದುಹೋಗುತ್ತಿದೆ. 140 ಕೋಟಿ ಹಣವನ್ನು ಇಟ್ಟಿದ್ದೀರಿ. ಮೊದಲು ಶಿಕ್ಷಕರ ನೇಮಕಾತಿ ಮಾಡಿ. ನಾನು ಹಿಂದಿನ ಸರ್ಕಾರದಲ್ಲಿದ್ದಾಗಲೂ ಆವತ್ತಿನಿಂದಲೂ ಹೇಳಿದ್ದೇನೆ. ಈಶ್ವರಪ್ಪನವರು ಶಿಕ್ಷಣ ಇಲಾಖೆಯನ್ನು ನಾನು ನಡೆಸುತ್ತಿದ್ದೆ ಎಂದು ಹೇಳಿದರು. ಆದರೆ. ನಾನೇನು ಶಿಕ್ಷಣ ಇಲಾಖೆಯನ್ನು ನಡೆಸಲು ಹೋಗಿರಲಿಲ್ಲ. ನಾನೇನು ಯಾವುದೂ ಹೊಸದನ್ನು ಮಾಡಲು ಹೋಗಿರಲಿಲ್ಲ.

ಶ್ರೀ ಸಿದ್ದರಾಮಯ್ಯ ; ಸೈಕಲ್‌ನಲ್ಲಿ ಭ್ರಷ್ಟಾಚಾರ ನಡೆದಿದೆಯೆಂದು ಹೇಳಿದ್ದಿರಲ್ಲಾ?

ಶ್ರೀ ಹೆಚ್.ಡಿ. ರೇವಣ್ಣ ; ನಾನೇನು ಭ್ರಷ್ಟಾಚಾರ ನಡೆದಿದೆಯೆಂದು ಹೇಳಲಿಲ್ಲ. ನಾನೇಕೆ ಅದನ್ನು ಹೇಳುವುದಕ್ಕೆ ಹೋಗಲಿ. ನಾನು ಮಾನ್ಯ ದಿನೇಶ್‌ಗುಂಡೂರಾವ್ ಸದಸ್ಯರಿದ್ದಾರೆ. ಅವರು ಅದರ ಬಗ್ಗೆ ಆರೋಪ ಮಾಡಿದ್ದನ್ನು ಹೇಳಿದೆ ಅಷ್ಟೆ.

ಶ್ರೀ ಸಿದ್ದರಾಮಯ್ಯ : ಇದಕ್ಕಿಂತ ಮೊದಲು ನಾನು ಒಂದು ಸ್ಟೇಟ್‌ಮೆಂಟ್‌ನ್ನು ಓದಿದ್ದೆ. ಅದು ಸರಿಯೋ ತಪ್ಪೋ ಎಂದು ತಿಳಿದುಕೊಳ್ಳುವುದಕ್ಕಷ್ಟೇ ಇದನ್ನು ಕೇಳಿದೆ.

ಶ್ರೀ ಹೆಚ್.ಡಿ. ರೇವಣ್ಣ ; ದಿನೇಶ್‌ಗುಂಡೂರಾವ್‌ರವರು ಈ ಸಭೆಯಲ್ಲಿ ಅದರ ಬಗ್ಗೆ ಮಾತನಾಡಿ ಅಂಕಿ ಅಂಶಗಳನ್ನು ಕೊಟ್ಟಿದ್ದರು. ಅದರ ಬಗ್ಗೆ ನಾನು ಹೇಳಿದ್ದು. ಇವತ್ತೂ ಅದನ್ನು ಹೇಳುತ್ತೇನೆ. ನಾನೇನು ಕದ್ದು ಇರಲು ಹೆದರಿಕೆಯೇ?

ನಿಮಗೆ ಕೆದಕಬೇಕು ಎಂದರೆ ಕೆದಕಿ. ನನ್ನದೇನೂ ಇಲ್ಲ. ಹಿಂದಿನ ಸರ್ಕಾರದವರು 1000 ಪ್ರೌಢಶಾಲೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಶಿಕ್ಷಕರನ್ನು ನೇಮಕ ಮಾಡಲು ಇದರಲ್ಲಿ ಏನಾದರೂ ಹಣ ಇಟ್ಟಿದ್ದೀರಾ? 500 ಪಿ.ಯು. ಕಾಲೇಜುಗಳು ಇದೆ. ಅದಕ್ಕೆ ಉಪನ್ಯಾಸಕರನ್ನು ನೇಮಕ ಮಾಡಲು ಇದರಲ್ಲಿ ಹಣ ಇಟ್ಟಿದ್ದೀರಾ? ಅದೇ ರೀತಿ ಮೊದಲು ದರ್ಜೆಯ ಕಾಲೇಜು ಸುಮಾರು 281 ಇದೆ. ಅದರ ಬಗ್ಗೆ ಏನಾದರೂ ಕಾಳಜಿ ಸರ್ಕಾರಕ್ಕೆ ಇದೆಯೇ? ಹೊಸ ಐ.ಟಿ.ಐ.ಗಳು ಇದೆ. ಅದಕ್ಕೆ ಶಿಕ್ಷಕರನ್ನು ನೇಮಕ ಮಾಡುವ. ಕಟ್ಟಡ ಮಾಡುವ ಕಾಳಜಿ ಸರ್ಕಾರಕ್ಕೆ ಇದೆಯೇ? ಇದರ ಬಗ್ಗೆ ಈಗ ಒತ್ತುಕೊಟ್ಟು ಇನ್ನೊಂದು ಎರಡು ವರ್ಷ ಬಿಟ್ಟು ಖಾಸಗಿಯವರಿಗೆ ಒತ್ತು ಕೊಟ್ಟಿದ್ದರೆ ಏನಾಗುತ್ತಿತ್ತು ? ಅದೇ ಹಣವನ್ನು ಈ ಕಡೆಗೆ ಕೊಟ್ಟಿದ್ದರೆ ಏನಾಗುತ್ತಿತ್ತು ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ ಬೇಗ ಮುಗಿಸಿ. ಬಹಳ ಮಾತನಾಡಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ ; ಎರಡು ನಿಮಿಷ. ಇದು important ವಿಷಯ. ಒಂದು ಕಡೆ ನೀವು ಶಿಕ್ಷಣಕ್ಕೆ ಒತ್ತು ಕೊಡಬೇಕೆಂದು ಹೇಳುತ್ತೀರಿ. ಇದರ ಬಗ್ಗೆ ಸರ್ಕಾರಕ್ಕೆ ಗಾಂಭೀರ್ಯತೆ ಇದೆಯೇ ಎಂದು ನಾನು ಕೇಳಬೇಕಾಗುತ್ತದೆ. ಏಕೆಂದರೆ. ಇವತ್ತು ಶಿಕ್ಷಣ ಇಲಾಖೆಗೆ ಕೇವಲ ಖಾಸಗಿಯವರಿಗೆ ಕೊಟ್ಟಿದ್ದೀರೇ ಹೊರತು ಅದು ಮತ್ತು ಸೈಕಲ್ ಇವೆರಡು ಬಿಟ್ಟರೆ ಬೇರೆ ಏನೂ ಇಲ್ಲ. ಶಿಕ್ಷಕರನ್ನು ನೇಮಕ ಮಾಡುವ ಬಗ್ಗೆ ಹೇಳಲಿಲ್ಲ. ಹಿಂದಿನ ಸರ್ಕಾರದಲ್ಲಿ 48 ಸಾವಿರ ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಾಯಿತು. ಈಗ ಅದನ್ನು ಮಾಡಲು ಏನು ತೊಂದರೆ? ಎಷ್ಟು ಹುದ್ದೆ ಖಾಲಿ ಇದೆ. ಅದನ್ನು ಮಾಡಿ. ಕೆಲವು ಹುಡುಗರು ಬಿ.ಎ. ಬಿ.ಎಸ್ಸಿ. ಮಾಡಿರುವವರು ಹತ್ತು. ಹದಿನೈದು ವರ್ಷ ಕೆಲಸ ಮಾಡಿ ಕೇವಲ ಎರಡು ಸಾವಿರ ಐದು ಸಾವಿರ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ನಮ್ಮ ಪಿ.ಯು. ಬೋರ್ಡ್‌ನ ನಿರ್ದೇಶಕರು ಯಾರಿದ್ದಾರೆ. ಅವರಿಗೆ ಒಂದು ಸ್ಪಷ್ಟವಾದ ಸೂಚನೆ ಕೊಡಿ. ಎಷ್ಟು ಜನ ಶಿಕ್ಷಕರು ಇದ್ದರೆ ಆಯೆ ಮಾಡಿಕೊಳ್ಳಿ ಎಂದು ಸೂಚನೆ ಕೊಡಿ. ಅದಕ್ಕೆ ಹೆದರಬೇಕೆ? ರೈತರ ಪರವಾಗಿ ಸರ್ಕಾರ ಇಷ್ಟೊಂದು ಕಾಳಜಿ ವಹಿಸುತ್ತಿರುವಾಗ. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಒಂದು ಕಡೆ ಹೊರಟಿದ್ದೀರಿ. ಇನ್ನೊಂದು ಕಡೆ ರೈತರ ಪರವಾಗಿ ಹೊರಟಿದ್ದೀರಿ. ಆದರೆ ಎಲ್ಲಾ ಕಡೆ ಅಭಾವ ಸೃಷ್ಟಿಯಾಗುತ್ತಿದೆ. ಒಂದು ಕಡೆ ಗೊಬ್ಬರ. ಒಂದು ಕಡೆ ವಿದ್ಯುತ್. ಒಂದು ಕಡೆ ಡ್ಯಾಂನಲ್ಲಿ ನೀರು ತುಂಬುತ್ತಿಲ್ಲ. ಅಬ್ಕಾರಿ ಇಲಾಖೆಯಿಂದ. ಮುಂದೆ ಜನರು ನೀರು ಕುಡಿಯಬೇಡಿ ಎಂದು. ಮಾನ್ಯ ಸಿದ್ದರಾಮಯ್ಯನವರು ಹೇಳಿದಂತೆ ಎಲ್ಲಾ ಕಡೆ ಬ್ರಾಂದಿ ಶಾಪ್‌ನ್ನು

ತೆಗೆಯಲು ಹೊರಟಿದ್ದೀರಿ. ಆದ್ದರಿಂದ ಶಿಕ್ಷಣಕ್ಕೆ ಒತ್ತು ಕೊಡಬೇಕು ಎಂಬ ನನ್ನ ಭಾವನೆಯನ್ನು ಹೇಳುತ್ತಿದ್ದೇನೆ. ಇವತ್ತು ನಮ್ಮಲ್ಲಿ ಸುಮಾರು 1266 ಪ್ರೀ ಮೆಟ್ರಿಕ್ ಹಾಸ್ಟೆಲ್‌ಗಳು ಇದೆ. ಸುಮಾರು 70 ಸಾವಿರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅದೇ ರೀತಿ ಇವತ್ತು ಪೋಸ್ಟ್ ಮೆಟ್ರಿಕ್ 300 ಇದ್ದು, 23 ಸಾವಿರ ಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಒಟ್ಟು 1566 ಹಾಸ್ಟೆಲ್‌ಗಳ ಪೈಕಿ 94 ಸಾವಿರ ಜನ ವ್ಯಾಸಂಗ ಮಾಡುತ್ತಿದ್ದಾರೆ. ಆ 94 ಸಾವಿರದಲ್ಲಿ ಇವತ್ತು ಎಷ್ಟು ಕಡೆ ತಾಲ್ಲೂಕು ಕೇಂದ್ರಗಳಲ್ಲಿ ಇನ್ನು ಪ್ರೀ ಮೆಟ್ರಿಕ್ ಹಾಸ್ಟೆಲ್‌ಗಳು ಇಲ್ಲ. ತಾಲ್ಲೂಕುಗಳಿಗೆ ಒಂದು ಹತ್ತು ಪ್ರೀ ಮೆಟ್ರಿಕ್ ಹಾಸ್ಟೆಲ್‌ಗಳನ್ನು ಕೊಡಿ ಏನಂತೆ? ಇವತ್ತು ಏನು 9 ಸಾವಿರ ಕೋಟಿ ಸಾಲ ಮಾಡಿ ಮಾಡುತ್ತಿದ್ದೀರಿ. ಅದರಲ್ಲಿ 52 ಪರ್‌ಸೆಂಟ್ ಪ್ಲಾನ್. 48 ಪರ್‌ಸೆಂಟ್ ನಾನ್ ಪ್ಲಾನ್‌ಗೆ ಕೊಡುತ್ತಿದ್ದೀರಲ್ಲಾ. ಅದರ ಬದಲು ಇದಕ್ಕೆ ಕೊಡಿ. ಬಡವರ ಮಕ್ಕಳು ವಿದ್ಯಾಭ್ಯಾಸ ಮಾಡಲಿ. ಶಿಕ್ಷಣಕ್ಕೆ ಒತ್ತು ಕೊಡಿ. ಇವತ್ತು ಸುಮಾರು 400 ಕಡೆ ಹಾಸ್ಟೆಲ್‌ಗಳಿಗೆ ಕಟ್ಟಡ ಇಲ್ಲ. ಅದಲ್ಲದೆಯೇ. ಅಡುಗೆ ಭಟ್ಟರು. ಅಡುಗೆ ಸಹಾಯಕರು ಇಲ್ಲ. ನಿನ್ನೆ ಪ್ರಶ್ನೋತ್ತರ ವೇಳೆಯಲ್ಲ ಸುಮಾರು 4000 ಅಡುಗೆಯವರ ಮತ್ತು ಸಹಾಯಕರ ಹುದ್ದೆಗಳು ಖಾಲಿ ಇದೆಯೆಂದು ಹೇಳಿದರು. ಬಡವರ ಮಕ್ಕಳ ಬಗ್ಗೆ ನಿಮಗೆ ಕರುಣೆ ಏನಿದೆ ಹೇಳಿ? ಇವತ್ತು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಹಾಸ್ಟೆಲ್‌ಗಳಿಗೆ ನೂರು ಸೀಟು ಬರುತ್ತಿಲ್ಲ. ಉದಾಹರಣೆಗೆ. 27 ಜಿಲ್ಲಾ ಕೇಂದ್ರದಲ್ಲಿ ಕನಿಷ್ಟ ಒಂದು ಜಿಲ್ಲಾ ಕೇಂದ್ರದಲ್ಲಿ ಒಂದು ಸಾವಿರ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿ. ವರ್ಷಕ್ಕೆ ಎಷ್ಟು ಹಣ ಬೇಕಾಗುತ್ತದೆ? ಹೊಸ ಎರಡು ಜಿಲ್ಲೆಗಳು ಸೇರಿ ಒಟ್ಟು 29 ಜಿಲ್ಲೆಗಳಿದೆ. ಏಕೆಂದರೆ ಬಿ.ಎ. ಓದುವವರು ಬಿ.ಎಸ್ಸಿ. ಇಂಜಿನಿಯರಿಂಗ್. ವೃತ್ತಿಪರ ವಿಷಯವನ್ನು ವ್ಯಾಸಂಗ ಮಾಡುವ ಬಡವರ ಮಕ್ಕಳು ಇರುತ್ತಾರೆ. ಕನಿಷ್ಟ ಒಂದೊಂದು ಜಿಲ್ಲೆಗಳಲ್ಲಿ ಸಾವಿರ ವಿದ್ಯಾರ್ಥಿಗಳಿಗೆ ಹೊಸ ವಿದ್ಯಾರ್ಥಿನಿಲಯವನ್ನು ಮಾಡಬೇಕು ಎಂಬ ಬೇಡಿಕೆಯನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇದಲ್ಲದೆ ಗಂಗಾಕಲ್ಯಾಣ ಸ್ಕೀಮ್. ಕೇವಲ 9008 ಅತಿ ಸಣ್ಣ ರೈತರು ಎಂದು ಹೇಳುತ್ತೀರಿ. ಆದರೆ ಕೊಟ್ಟಿರುವುದು ಕೇವಲ 9800 ಸಾವಿರ ಯೂನಿಟ್ಸ್. 50 ಸಾವಿರ ಯೂನಿಟ್ಸ್‌ನ್ನು ಕೊಡಿ ಏನಾಗುತ್ತದೆ? ಹತ್ತು ಸಾವಿರ ರೂಪಾಯಿಯಂತೆ ಸಬ್ಸಿಡಿ ಕೊಡುವುದು ಇದೆ. ಇದಲ್ಲದೆ ಮೊನ್ನೆ ಕೆಲವನ್ನು ಘೋಷಣೆ ಮಾಡಿದ್ದೀರಿ. ಹಿಂದುಳಿದ ವರ್ಗದಲ್ಲಿ ಕೆಲವು ಸಮಾಜಕ್ಕೆ ಮಾಡಿದ್ದೀರಿ. ಆದರೆ ಅಲೆಮಾರಿ ಸಮಾಜ ಇರಬಹುದು. ಜೋಗಿ, ದೊಂಬಿದಾಸ ಇರಬಹುದು. ಇದರಲ್ಲಿ ಸುಮಾರು 41 ಲಕ್ಷ ಜನರು ಇದ್ದಾರೆ. ಈ 41 ಲಕ್ಷದವರಿಗೆ ಏನಾದರೂ

ಮೊರಾರ್ಜಿದೇಸಾಯಿ ಶಾಲೆಯನ್ನು ಮಾಡಿದ್ದೀರಾ? ಈ ಸಮಾಜದವರು ನಿಮಗೆ ಓಟನ್ನು ಕೊಡುವುದಿಲ್ಲವೆಂದು ಅವರನ್ನು neglect ಮಾಡಿದ್ದೀರಾ ಎಂಬುದನ್ನು ಹೇಳಬೇಕು. ಏಕೆಂದರೆ ಹಿಂದುಳಿದ ವರ್ಗದವರಿಗೆ ಒಂದಕ್ಕೆ ಮೂರು ಪಟ್ಟು ಮಾಡಿದ್ದೇವೆಂದು ಹೇಳುತ್ತೀರಿ. ಆದರೆ ಈ ಸಮಾಜದವರನ್ನು ಏಕೆ neglect ಮಾಡಿದಿರಿ? ಅವರಿಗೆ ಮೊರಾರ್ಜಿದೇಸಾಯಿ ಶಾಲೆಯನ್ನು ಮಾಡಿ. ಇದೇ ರೀತಿ ಸವಿತಾ ಸಮಾಜಕ್ಕೆ ಪ್ಯಾಕೇಜ್ ಕೊಡಲು ಮಾಡಿದ್ದೀರಿ. ಸವಿತಾ ಸಮಾಜ ಇರಬಹುದು. ಕಮ್ಮಾರ ಇರಬಹುದು. ತಿಗಳರು ಇರಬಹುದು. ಕುಂಬಾರರು ಇರಬಹುದು ಬಡಗಿ ಇರಬಹುದು. ಈ ಸಮಾಜದವರನ್ನೂ ಇದಕ್ಕೆ ಸೇರಿಸಿಕೊಳ್ಳಿ. ಇದಲ್ಲದೆ. ಇವತ್ತಿನ ದಿವಸ ಸಮಾಜ ಕಲ್ಯಾಣ್ ಇಲಾಖೆಯಲ್ಲಿ ಮೊರಾರ್ಜಿ ದೇಸಾಯಿ ಶಾಲೆ ಮಾಡುತ್ತೇವೆ. ಅದನ್ನು ಕೇವಲ ಎಸ್.ಎಸ್.ಎಲ್.ಸಿ.ಯ ವರೆಗೆ ಮಾಡುತ್ತೇವೆ ಇದನ್ನು ಪಿ.ಯು.ಸಿ.ಯವರೆಗೆ ಮಾಡಿ. ಬಡವರ ಮಕ್ಕಳಿಗೆ ಪಿ.ಯು.ಸಿ.ಯವರೆಗಾದರೂ ವಿದ್ಯಾಭ್ಯಾಸ ಕೊಡಲು ಸರ್ಕಾರ ಅವಕಾಶ ಮಾಡಬಹುದಲ್ಲವೇ? 5 ರಿಂದ 10ನೇ ತರಗತಿಯವರೆಗೆ ಮೊರಾರ್ಜಿದೇಸಾಯಿ ಶಾಲೆಯನ್ನು ಮಾಡಿದ್ದೀರಿ. ಅನಂತರ ಅದು ಕಟ್ ಆಗುತ್ತದೆ. ಅದನ್ನು ಪಿ.ಯು.ಸಿ.ಯವರೆಗೆ ತೆಗೆದುಕೊಂಡು ಹೋಗಿ. ಬಡವರ ಮಕ್ಕಳು ಪಿ.ಯು.ಸಿ.ಯವರೆಗೆ ವಿದ್ಯಾಭ್ಯಾಸ ಮಾಡಿದರೆ ಮುಂದಿನ ದಿನಗಳಲ್ಲಿ ಬೇರೆ ವಿದ್ಯಾಭ್ಯಾಸವನ್ನು ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ಮೊರಾರ್ಜಿ ದೇಸಾಯಿ ಶಾಲೇಗಳೇನಿದೆ. ಅದನ್ನು ಪಿ.ಯು.ಸಿ.ಯವರೆಗೆ ತೆಗೆದುಕೊಂಡು ಹೋಗಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಮತ್ತು ಸಮಾಜ ಕಲ್ಯಾಣ ಸಚಿವರನ್ನು ನಾನು ಒತ್ತಾಯ ಮಾಡುತ್ತೇನೆ. ಇವತ್ತಿನ ದಿವಸ ಹಾಸ್ಟೆಲ್‌ಗಳದ್ದು. ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಲ್ಲಿರುವ ಹುದ್ದೆಗಳ ಬಗ್ಗೆ ತಮಗೆ ಹೇಳಿದ್ದೇನೆ. ಇವತ್ತಿನ ದಿವಸ ಈ ಸರ್ಕಾರ ಏನಾದರೂ ಒಳ್ಳೆಯ ಕೊಡುಗೆ ಕೊಟ್ಟಿದೆ ಎಂದರೆ. ಹಿಂದೆ ಕುಮಾರಸ್ವಾಮಿಯವರು ಯಡಿಯೂರಪ್ಪನವರು ಇಬ್ಬರೂ ಸೇರಿ ಸಾರಾಯಿ ನಿಷೇಧವನ್ನು ತಂದರು. ಅದನ್ನು ತೆಗೆದದ್ದು ಒಳ್ಳೆಯದಾಯಿತು. ಆದರೆ ಮೊನ್ನೆ ಚುನಾವಣಾ ಸಂದರ್ಭದಲ್ಲಿ ಜನಾರ್ಧನ್ ಪೂಜಾರಿಯವರು ಸಾರಾಯಿಯನ್ನು ನಮ್ಮ ಸರ್ಕಾರ ವಾಪಸ್ ಅಧಿಕಾರಕ್ಕೆ ಬಂದರೆ ಅದನ್ನು ವಾಪಾಸ್ ತೆಗೆಯುತ್ತೇವೆಂದು ಸ್ಟೇಟ್‌ಮೆಂಟ್ ಮಾಡಿದರು. ಯಾವುದೇ ಕಾರಣಕ್ಕೆ ಇದನ್ನು ಬಿಲ್‌ಕುಲ್ ಮಾಡುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರು ಈ ರಾಜ್ಯದ ಜನತೆಗೆ ಚುನಾವಣೆಯ ಸಂದರ್ಭದಲ್ಲಿ ಹೇಳಿದ್ದರು. ಆದರೆ ಈಗ ಏನು ಮಾಡಿದ್ದಾರೆ? ಈಗ ಏನು ಮಾಡಿದ್ದಾರೆ. ಒಂದು ಸಾವಿರ ಸಾರಾಯಿ ಅಂಗಡಿ. Bar and

Restaurant 500, ಅಐ–9 ನಮ್ಮ ಅಬಕಾರಿ ಮಂತ್ರಿಗಳು ಮಾನ್ಯ ಸುಬ್ರಹ್ಮಣ್ಯ ನಾಯ್ಡು ಸಾಹೇಬರು ಹೇಳಬೇಕು. ಯಾವ ಉದ್ದೇಶಕ್ಕೆ ಇದನ್ನು ಮಾಡಿದ್ದೀರಿ. ಒಂದು ಕಡೆ ತಾವೇ ಹಿಂದಿನ ಸರ್ಕಾರದಲ್ಲಿ ಹೇಳಿದ್ದೀರಿ. ಅಬಕಾರಿಯನ್ನು ತೆಗೆದು ಹಾಕಿ ಬಿಡೋಣ ಎಂದು ಹೇಳಿದ್ದೀರಿ. ಏಕೆಂದರೆ. ಮೊನ್ನೆ ಬೆಂಗಳೂರು ನಗರದಲ್ಲಿ 200 ಜನ ಕಳ್ಳಭಟ್ಟಿ ಸಾರಾಯಿ ಕುಡಿದು ಸತ್ತು ಹೋಗಿದ್ದಾರೆ. ಒಂದು ಕಡೆ ನೀವೇ ಸರ್ಕಾರದವರು ಪ್ರೋತ್ಸಾಹ ಕೊಡುತ್ತಿದ್ದೀರಿ. ಕಳೆದ ಸಾರಿ ಕುಮಾರಸ್ವಾಮಿಯವರ ಸರ್ಕಾರದಲ್ಲಿ ಐದು ಡಿಸ್ಟಿಲರಿ ಕೊಟ್ಟಿರಿ. ಆ ಕಾರ್ಖಾನೆಗಳಿಗೆ ಅನುಕೂಲವಾಗಲಿ ಎನ್ನುವ ಉದ್ದೇಶಕ್ಕಾಗಿ ಏನಾದರೂ ಮಾಡುತ್ತಿದ್ದೀರೋ? ಉದಾಹರಣೆಗೆ ಹೇಳುವುದಾದರೆ. ದೂರದರ್ಶನದಲ್ಲಿ ನೋಡಿದೆ. ಮೊನ್ನೆ ಕಳ್ಳಭಟ್ಟಿ ಸಾರಾಯಿ ಕುಡಿದು 200 ಜನ ಸತ್ತರು. ಈ 2000 ಕೋಟಿ ರೂ. ಹಣ ಇವತ್ತು ಅಬಕಾರಿ ಇಲಾಖೆ ಒಂದರಿಂದ ಹೋಗುತ್ತಿದೆ ಎಂದು ಮಾನ್ಯ ಸಿದ್ದರಾಮಯ್ಯನವರು ಹೇಳಿದರು. ಅವರು ಹೇಳಿರುವುದು ನಿಜವೆಂದು ನಾನು ಇವತ್ತು ಹೇಳಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ. ಇವತ್ತು ನಮ್ಮ ಚುನಾವಣೆಯ ಸಂದರ್ಭದಲ್ಲಿ ಯಾವ ಯಾವ ರಾಜ್ಯದಿಂದ ಎಷ್ಟು ಹಣ ಬಂತು. ಎಷ್ಟು ಕೇಸ್ ಬ್ರಾಂದಿ ಬಂದಿದೆ. ಸುಮಾರು 20 ಲಕ್ಷ ಕೇಸ್ ಬ್ರಾಂದಿ ಇವತ್ತು ಹೊರ ರಾಜ್ಯದಿಂದ ನಮ್ಮ ರಾಜ್ಯಕ್ಕೆ ಬಂದಿದೆ. ಆ 20 ಲಕ್ಷಕ್ಕೆ ಟ್ಯಾಕ್ಸ್ ಏನು? ಸನ್ಮಾನ್ಯ ಸಭಾಧ್ಯಕ್ಷರೆ. 20 ಲಕ್ಷ ಕೇಸ್‌ಗೆ ಟ್ಯಾಕ್ಸ್ ಎಷ್ಟಾಗುತ್ತದೆ? ಇದರಲ್ಲಿ ಯಾರ್ಯಾರು ಅಧಿಕಾರಿಗಳು Involve ಆಗಿದ್ದಾರೆ? ಒಂದು ಕಡೆ ಹೊರ ರಾಜ್ಯದಿಂದ ನೀವೇ ಸೆಕೆಂಡ್ಸ್ ತರಿಸಿ ಹಳ್ಳಿಗಳಲ್ಲಿ 10–15 ಅಂಗಡಿಗಳಿವೆ. ನಿಮ್ಮ ಅಬಕಾರಿ ಇಲಾಖೆಯ ಅಧಿಕಾರಿಗಳು ನಮ್ಮ ಕೈಯಲ್ಲಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ನಾನು ಮೊನ್ನೆ ಸುಮಾರು 15 ದಿವಸಗಳ ಕಾಲ ಪ್ರವಾಸ ಮಾಡಿದಂತಹ ಸಂದರ್ಭದಲ್ಲಿ ಯಾವ ಹಳ್ಳಿಗೆ ಹೋದರೂ ನಮ್ಮ ಊರಿನಲ್ಲಿ ಹೋದರೆ ಯಾವ ಬ್ರಾಂಡ್ ಬೇಕು ಹೇಳಿ ಸೆಕೆಂಡ್ಸ್ ಇದೆ ಕೊಡುತ್ತೇವೆಂದು ಹೇಳುತ್ತಾರೆ. ನಿಮ್ಮ ಅಧಿಕಾರಿಗಳು ನಮ್ಮ ಹತ್ತಿರ ಯಾವ ಸ್ಟಾಫ್ ಇಲ್ಲ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಪೋಲಿಸ್ ಇಲಾಖೆಯವರಿಗೆ ಕೇಳಿದರೆ ಇಲ್ಲ ಸಾರ್ ಅಬಕಾರಿ ಇಲಾಖೆಯವರು ರೈಡ್ ಮಾಡಬೇಕು. ನಾವು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಒಂದು ಕಡೆ ನೀವು ಸಾರಾಯಿ ತೆಗೆಯುತ್ತೀರಿ. ಇನ್ನೊಂದು ಕಡೆ ಒಂದು ಸಾವಿರ ಅಂಗಡಿ ಯಾರಿಗೆ ಕೊಡಬೇಕು. ಅದರ ಘನ ಕಾರ್ಯ ಏನು? ಒಂದು ಕಡೆ ಬರಗಾಲ ಬಂದು ಜನ ಸಾಯುತ್ತಿದ್ದಾರೆ. ಹಳ್ಳಿಯ ರೈತರು ವಿಷ ತೆಗೆದು ಕೊಳ್ಳುತ್ತಿದ್ದಾರೆ. ಇವತ್ತು ಒಂದು ಸಾವಿರ ಅಂಗಡಿ ಕೊಟ್ಟು

ಮತ್ತೆ ಅವನು ಹೊಲ ಮನೆ ಮಾರಿಕೊಂಡು ಕುಡಿದು ಸಾಯಂಕಾಲ ಮನೆಗೆ ಬಂದು ಅವನ ಹೆಂಡತಿಗೆ ಗೂಸ ಹೊಡೆಯುವ ಕಾರ್ಯಕ್ರಮಕ್ಕಾಗಿ ಏನಾದರೂ ಮಾಡಿದ್ದೀರಾ? ಅದಾದರೂ ತಾವು ದಯಮಾಡಿ ಹೇಳಿ. ಗ್ರಾಮೀಣ ಪ್ರದೇಶದಲ್ಲಿ ಗಂಡ ಹೆಂಡತಿಗೂ ಕುಡಿಸಬೇಕೆಂದಿದ್ದರೆ ಇನ್ನು ಒಂದು ಸಾವಿರ ಅಂಗಡಿ ಕೊಡಿ ನಮ್ಮದೇನು ಅಭ್ಯಂತರವಿಲ್ಲ. ಆ ಕಾರ್ಯಕ್ರಮ ಮಾಡುವುದಕ್ಕೋಸ್ಕರ ತಾವು ಇದನ್ನು ಮಾಡಿದ್ದೀರಾ ಹೇಳಿ? ಒಂದು ಸಾವಿರ ಅಂಗಡಿ ಯಾವ ತರಹ ಕೊಡುತ್ತೀರಾ? ಏನಾದರೂ BJP ಕಾರ್ಯಕರ್ತರಿಗೆ ಕೊಡಬೇಕೆಂದು ಅಜೆಂಡಾ ಇಟ್ಟಿದ್ದೀರಾ? BJP ಕಾರ್ಯಕರ್ತರಿಗೆ Bar and Restaurant ಗಳನ್ನು ಕೊಡಬೇಕೆಂದು ಅಜೆಂಡಾ ಇಟ್ಟುಕೊಂಡಿದ್ದರೆ ಕೊಟ್ಟುಕೊಳ್ಳಿ ನಮ್ಮದೇನು ಅಭ್ಯಂತರವಿಲ್ಲ. ತಮ್ಮ ಕಾಲದಲ್ಲಿ ಇದು ಆಗಬಾರದು. ತಾವು ಅಬಕಾರಿ ಸಚಿವರಾಗಿದ್ದಂತಹ ಕಾಲದಲ್ಲಿ ಇದನ್ನು ಮಾಡುವುದಕ್ಕೆ ಹೋಗಬೇಡಿ. ದಯಮಾಡಿ ಸಾವಿರ ಅಂಗಡಿ ಕೊಡುವುದು. 500 ಬ್ರಾಂದಿ ಶಾಪ್ ಕೊಡುವುದು. ಮಾಡಬೇಡಿ. ಏಕೆಂದರೆ ನೀವು Industries ಕೊಟ್ಟು ಎಲ್ಲಾ ಮಕ್ಕಳಿಗೂ ಅನ್ನ ಕೊಡುತ್ತೇವೆಂದು ಹೇಳಿದವರು. ಅಬಕಾರಿ ಇಲಾಖೆ ತೆಗೆದುಕೊಂಡು ಏಕೆ ಸಾವಿರ ಬ್ರಾಂದಿ ಶಾಪ್ ಕೊಡುವುದಕ್ಕೆ ಹೋಗುತ್ತಿದ್ದೀರಿ? ನಿಮಗೆ ದೇವರು ಇನ್ನು ನಾಲ್ಕಾರು ದಿನ ಒಳ್ಳೆಯ ಆರೋಗ್ಯ ಕೊಟ್ಟು ಈ ಹಳ್ಳಿಯ ರೈತರನ್ನು ಉಳಿಸಲಿ ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅದರ ಬದಲು ನೀವು ಬ್ರಾಂದಿ ಕುಡಿಸುವುದು ಬೇಡ. ಈ ಸರ್ಕಾರ ಈ ಮುಂಗಡ ಪತ್ರದಲ್ಲಿ ತಂದಿರುವ ಕೆಲವು ಆಡಳಿತ ಸುಧಾರಣೆ ಬಗ್ಗೆ ಕೂಡ ಹೇಳಬೇಕಾಗುತ್ತದೆ. ಏಕೆಂದರೆ 58 ವರ್ಷ ಸೇವಾವಧಿ ಇರುವುದನ್ನು 60 ವರ್ಷಕ್ಕೆ ಮಾಡಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹೊರೆಯಾಗುತ್ತದೆ. ಒಂದು ವರ್ಷಕ್ಕೆ 1.200 ಕೋಟಿ ಹೊರೆಯಾಗಬಹುದೋ ಏನೋ ನನಗೆ ಗೊತ್ತಿಲ್ಲ. ಅದನ್ನು ತಾವು ತಿಳಿಸಬೇಕು. ಇವತ್ತು ನಿರುದ್ಯೋಗಿ ಯುವಕರು ಹಳ್ಳಿಯಲ್ಲಿ ಸಾಯುತ್ತಿದ್ದಾರೆ. ಅದನ್ನು ಏಕೆ ಮಾಡಬೇಕಾಗಿತ್ತು? ಅದರ ಬದಲು ನಿರುದ್ಯೋಗಿ ಯುವಕರಿಗೆ ಉದ್ಯೋಗವಕಾಶಗಳು ಸಿಗುವುದಾ? ಈ ಸರ್ಕಾರದ ಆಡಳಿತ ಹೇಗೆ ನಡೆಯುತ್ತಿದೆ ಎಂದರೆ. ಬಜೆಟ್‌ನಲ್ಲಿ ಎಲ್ಲಾ ಮಾಡಿದ್ದೀರಿ. ಇನ್ನು ಎರಡು ಕಾರ್ಯಕ್ರಮಗಳನ್ನು ಹಾಕಿಲ್ಲ. ಒಂದು ಯಾರೇ ಹಿರಿಯ ಅಧಿಕಾರಿಗಳಿರಲಿ. ಅವರು ವರ್ಗಾವಣೆ ಆದರೆ ಅವರಿಗೆ ಜಾಗ ಕೊಡಬೇಕು. ಅವರಿಗೆ ಜಾಗ ಕೊಡದೆ ಹೋದರೆ ಅದು ಸರ್ಕಾರಕ್ಕೆ ನಷ್ಟವಾಗುವುದಿಲ್ಲವಾ? ವರ್ಗಾವಣೆಗಾಗಿ ಇಷ್ಟು ಹಣ ಇಟ್ಟಿದ್ದೇವೆಂದು ಬಜೆಟ್ ಭಾಷಣದಲ್ಲಿ ಹಾಕಿದ್ದರೆ ಚೆನ್ನಾಗಿತ್ತು. ಸರ್ಕಾರಕ್ಕೆ ಹೇಗೂ ದುಡ್ಡಿಲ್ಲವೆಂದು

ಹೇಳಿದಿರಿ. IAS officer ಇರಬಹುದು. IPS officer ಇರಬಹುದು. ಅಥವಾ ಚೀಫ್ ಇಂಜಿನಿಯರ್‌ಗಳು ಇರಬಹುದು. ಸೂಪರಿಂಟೆಂಡೆಂಟ್ ಇಂಜಿನಿಯರ್‌ಗಳು ಇರಬಹುದು. ವರ್ಗಾವಣೆ ಮಾಡಿ ಎರಡೆರಡು ತಿಂಗಳುಗಳಾದರೂ ನೀವು ಅವರಿಗೆ ಜಾಗ ಕೊಡುತ್ತಿಲ್ಲ. ಇದರ ಉದ್ದೇಶವೇನು? ಯಾವ ಉದ್ದೇಶದಿಂದ ಕೊಡುತ್ತಿಲ್ಲ ಹೇಳಿ ದಯಮಾಡಿ. ಯಾವ ರೀತಿ ಮಾಡುತ್ತಿದ್ದೀರಿ ಎಂದು ರಾಜ್ಯದ ಜನತೆ ನೋಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ. ಸರ್ಕಾರದ ಅಧಿಕಾರಿಗಳನ್ನು ವರ್ಗ ಮಾಡಿ. ನಾವೇನು ಬೇಡವೆಂದು ಹೇಳುವುದಿಲ್ಲ. ಅದಕ್ಕೇನು ಮಾರ್ಗಸೂಚಿ ಇಟ್ಟಿದ್ದೀರಿ ಮಾಡಿ. ನಮ್ಮದೇನು ಅಭ್ಯಂತರವಿಲ್ಲ. ಆದರೆ ಅವರಿಗೆ ಜಾಗ ಕೊಡಬೇಕು. ಒಬ್ಬ IAS ಅಧಿಕಾರಿ ಇರುತ್ತಾನೆ. ಅವನಿಗೆ ಜಾಗ ಕೊಡದೆ ಹೋದರೆ ಒಂದು ದಿನಕ್ಕೆ ಸರ್ಕಾರದ ಹಣ ಎಷ್ಟು ನಷ್ಟವಾಗುತ್ತದೆ? ಯಾರ ಹಣ ಹೋಗುವುದು? IPS Officers ಗೆ ಎಷ್ಟು ಜನರಿಗೆ ವರ್ಗಾವಣೆ ಮಾಡಿದ್ದೀರಿ? ಅವರಿಗೆ ಏಕೆ ಜಾಗ ಕೊಟ್ಟಿಲ್ಲ. Chief Engineerಗಳನ್ನು ವರ್ಗಾವಣೆ ಮಾಡಿದ್ದೀರಿ. ಎಷ್ಟು ಜನರಿಗೆ ಜಾಗ ಕೊಟ್ಟಿಲ್ಲ. ಜಾಗ ಕೊಡದೇ ಇರುವುದಕ್ಕೆ ಕಾರಣವೇನು? ಅದನ್ನೂ ಕೂಡ ಬಜೆಟ್‌ನಲ್ಲಿ ವರ್ಗಾವಣೆ ಮಾಡುತ್ತೇವೆ. ಸರ್ಕಾರಕ್ಕೆ ಹಣ ಇಲ್ಲವೆಂದು ಅದನ್ನೂ ಹರಾಜು ಹಾಕುವುದಾದರೆ ಹರಾಜು ಹಾಕಿ. ನಮ್ಮದೇನು ಅಭ್ಯಂತರವಿಲ್ಲ. ಇದಲ್ಲದೆ. ಉದಾಹರಣೆಗೆ ಹೇಳುವುದಾದರೆ ಇವತ್ತು ಏನು ಈ ಸರ್ಕಾರ ಬಂದ ಮೇಲೆ ಕೆಲವು ಬೆಳವಣಿಗೆಗಳು ನಡೆಯುತ್ತಿವೆ. ವಿರೋಧ ಪಕ್ಷದ ಶಾಸಕರನ್ನು ಯಾವ ರೀತಿ ಮಾಡುತ್ತಿದ್ದೀರೆಂದು ತಮಗೆಲ್ಲಾ ತಿಳಿದಿರುವಂತಹ ವಿಷಯ. ಮೊನ್ನೆ ನಮ್ಮ ಪಕ್ಷದವರು ಇಬ್ಬರು ಶಾಸಕರು ಹೋದರು. ಕಾಂಗ್ರೆಸ್ ಪಕ್ಷದ ಶಾಸಕರು ಇಬ್ಬರು ಹೋದರು. ಶಾಸಕರು ಹೋದಾಗ ನಾವೇನಾದರೂ ಅವರ ಮನೆಗಳಿಗೆ ಕಲ್ಲು ಹೊಡೆಸುವುದಕ್ಕೆ ಹೋಗಿದ್ದೆವಾ? ಮೊನ್ನೆ ಲೋಕಸಭೆಯಲ್ಲಿ ಮತ ಹಾಕುವಂತಹ ಸಂದರ್ಭದಲ್ಲಿ ಮೂರು ಜನ ಬಿ.ಜೆ.ಪಿ ಪಕ್ಷದ ಶಾಸಕರು ಅವರ ವಿರುದ್ಧ ಓಟು ಹಾಕಿದರೆಂದು ನಿನ್ನೆ ಬೆಂಗಳೂರು ನಗರದಲ್ಲಿ ಅವರ ಕಛೇರಿಗೆ ಹೋಗಿ ಕಲ್ಲು ತೂರಿಸಿದರಲ್ಲ. ಇದು ಒಳ್ಳೆಯದಾ? ಒಳ್ಳೆಯ ಬೆಳವಣಿಗೆಯಾ? ನಾವೂ ಏನಾದರೂ ಮಾಡಬೇಕಾ ಹೇಳಿ. ನಾವು ಏನಾದರೂ ಶಾಸಕರು ನಿಮ್ಮ ಪಕ್ಷಕ್ಕೆ ಬಂದಾಗ ಕಲ್ಲು ತೂರಬೇಕೆಂದರೆ ಹೇಳಿ. ನಾವೂ ಮಾಡುತ್ತೇವೆ. ಇನ್ನು ಅರ್ಧ ಡಜನ್ ನಮ್ಮ ಶಾಸಕರನ್ನು ಎಳೆದುಕೊಳ್ಳಿ. ಮಂತ್ರಿ ಕೊಡಿ. ಅವರನ್ನು ಹೊರಗಡೆ ಕೂರಿಸಿ. ನಾವು ಸಂತೋಷ ಪಡುತ್ತೇವೆ. ಏಕೆಂದರೆ ನಮ್ಮ ಕೈಯಲ್ಲಿ ಮತ್ತು ಕುಮಾರಸ್ವಾಮಿಯವರ ಕೈಯಲ್ಲಿ ಕೊಡುವುದಕ್ಕಾಗಲಿಲ್ಲ. ಖರ್ಗೆ ಸಾಹೇಬರ ಕೈಯಲ್ಲಿ ಕೊಡುವುದಕ್ಕಾಗಲಿಲ್ಲ.

ನೀವಾದರೂ ಕೊಡುತ್ತಿದ್ದೀರಿ. ನಿಮಗೆ ಬೇಕಾದರೆ ಸನ್ಮಾನ ಮಾಡುತ್ತೇವೆ. ಅದನ್ನೂ ಈ ಬಜೆಟ್ ಪುಸ್ತಕದಲ್ಲಿ ಹಾಕಿದ್ದರೆ ಚೆನ್ನಾಗಿತ್ತು. ಯಾರ್ಯಾರು ಪಕ್ಷಾಂತರಿಗಳಿಗೆ ಈ ಸರ್ಕಾರ ಮಂತ್ರಿ ಮಾಡುತ್ತದೆ. ತಾವು ಯಾರು ಬೇಕಾದರೂ ರಾಜೀನಾಮೆ ಕೊಟ್ಟು ಬರಬಹುದು ಎಂದು. ಪಕ್ಷಾಂತರ ಮಾಡುವುದಕ್ಕೆ ಅವಕಾಶ ಮಾಡುವುದಕ್ಕೆ ಈ ಬಜೆಟ್‌ನಲ್ಲಿ ಒಂದು ಪ್ರಾವಿಷನ್ ಇಡಬೇಕಾಗಿತ್ತು ಎಂದು ಮಾನ್ಯ ಸಭಾಧ್ಯಕ್ಷರಲ್ಲಿ ಕೇಳುತ್ತಿದ್ದೇನೆ. ರೇಟ್ ಯಾವ ಕಾತೆ ಕೊಡುತ್ತೀರಿ. ಎರಡನ್ನು ಹೇಳಿ. ಇದು ಹೇಳುವುದಕ್ಕೆ ಹೋದರೆ ಇನ್ನು ಒಂದು ದಿನ ಬೇಕಾಗುತ್ತದೆ. ಒಂದು ಕಡೆ ಪಕ್ಷಾಂತರ ಅಗುತ್ತಿದೆ. ಇನ್ನೊಂದು ಕಡೆ ಯಾರ್ಯಾರು ನಿಮ್ಮ ಪಕ್ಷವನ್ನು ಬಿಟ್ಟಿದ್ದಾರೆ. ಅವರ ಮನೆಗೆ ಹೋಗಿ ಕಲ್ಲು ತೂರಿಸುವಂತಹ ಕಾರ್ಯಕ್ರಮ ನಡೆಯುತ್ತಿದೆ. ಇನ್ನೊಂದು ಕಡೆ ನಮ್ಮ ಈಶ್ವರಣ್ಣನವರು ಅವರು ಪಾಪ. ದೇವರ ಹಾಗೆ. ಅಂತಹವರ ಕಾಲದಲ್ಲಿ ಕೆಲಸ ಮಾಡಿದ್ದು ಎನಕ್ಕೈರಿ ಮಾಡುವುದಕ್ಕೆ ನೀವು ಬಿಲ್ ಸ್ಟಾಪ್ ಮಾಡಿಸುವುದಕ್ಕೆ ಸರ್ಕಾರಿ ಆದೇಶ ಹೊರಡಿಸಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ. ದೇವರಂತಹವರು ಎಂದು ಹೇಳಿ ಈ ಆಟ ಆಡುವುದು ಬೇಡ. ನಿಮ್ಮ statement ನೋಡಿದರೆ. ಈಗ ಏನು ಹೇಳುತ್ತಿದ್ದೀರಿ?

ಶ್ರೀ ಹೆಚ್.ಡಿ. ರೇವಣ್ಣ ; ನೋಡಿ. ಮಾನ್ಯ ಈಶ್ವರಪ್ಪನವರು ಗಾಬರಿ ಆಗುವ ಅಗತ್ಯವಿಲ್ಲ. ಈಶ್ವರಪ್ಪನವರು ಪ್ರಾಮಾಣಿಕರು. ಅದರಲ್ಲಿ ಎರಡು ಮಾತಿಲ್ಲ. ಆದರೆ ಈಶ್ವರಪ್ಪನವರ ಮೇಲೆ ಅವರು ಕೆಲಸ ಮಾಡಿರುವುದರ ಮೇಲೆ ನೀರಾವರಿ ಇಲಾಖೆಯಲ್ಲಿ ಈಶ್ವರಪ್ಪನವರ ಕಾಲದಲ್ಲಿ ಏನೇನು ಕೆಲಸ ಮಾಡಿದ್ದಾರೆ. ಅಷ್ಟೂ ಬಿಲ್ಲನ್ನು ನಿಲ್ಲಿಸಿ. ಈಶ್ವರಪ್ಪನವರ ಕಾಲದಲ್ಲಿ ಯಾರು ಕೆಲಸ ಮಾಡಿದ್ದಾರೆ. ಅವರ ಹೆಸರು, ವಿಳಾಸ, ಎಲ್ಲಾ ಕಳುಹಿಸಿ ಎಂದು ಸರ್ಕಾರಿ ಆದೇಶ ಇದೆ. ಆದೇಶ ಓದಿ ಎಂದರೆ ಬೇಕಾದರೆ ಓದುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ. ಮುಖ್ಯ ಮಂತ್ರಿಗಳಾಗಿದ್ದವರು ಅಲ್ಲಿ ಪಕ್ಕದಲ್ಲಿಯೇ ಇದ್ದಾರೆ. ನೀವೂ ಬಹಳ ವರ್ಷಗಳ ಕಾಲ ಮಂತ್ರಿಗಳಾಗಿದ್ದವರು. ಯಾವ ಯಾವ ಇಲಾಖೆಗಳಿಗೆ ನಿಲ್ಲಿಸಬೇಕೆಂದು ಯೋಚನೆ ಮಾಡಿದ್ದಾರೆ. ನಿಲ್ಲಿಸಿದ್ದಾರೆ. ಆಮೇಲೆ ಪೇಮೆಂಟ್ ಮಾಡುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ ; ಮಾನ್ಯ ಅಧ್ಯಕ್ಷರೆ. "ನಿಗಮ ಹಾಗೂ ನಿಗಮೇತರ ಪಲಯಗಳ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ನೀರಾವರಿ ಯೋಜನೆಗಳ ಅಡಿಯಲ್ಲಿ

ಬಾಕಿ ಬಿಲ್ಲುಗಳ ವಿವರ ಒದಗಿಸುವ ಬಗ್ಗೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ದಿನಾಂಕ 1-06-08 ರ ಅಂತ್ಯಕ್ಕೆ ವಿವಿಧ ನೀರಾವರಿ ಯೋಜನೆಗಳ ಸಾರ್ವಜನಿಕರ ಬಿಲ್ಲುಗಳನ್ನು ಈ ಕೂಡಲೆ 27-06-08ರೊಳಗೆ ಎಲ್ಲಾ ವಿಳಾಸದೊಂದಿಗೆ ಕಳುಹಿಸಿ ಕೊಡಿ. ಮತ್ತೆ ಸರ್ಕಾರದಿಂದ ಮುಂದಿನ ಆದೇಶ ಕೊಡುವವರೆಗೆ. ಈಶ್ವರಪ್ಪನವರು ಮಾಡಿರುವಂತಹ ಕೆಲಸ ಯಾವುವು ಇವೆ. ಅವುಗಳಿಗೆ ಬಿಲ್ಲು ಕೊಡಬೇಡಿ ಎಂದು ಇದರಲ್ಲಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವೇನು ಹೇಳುತ್ತಿದ್ದೀರೋ. ಅದೆಲ್ಲಾ ಕೂಡ circularನಲ್ಲಿ ಇದೆ ಎಂದು ವರದಿಗಾರರು ನೋಟ್ ಮಾಡಿಕೊಳ್ಳುತ್ತಿದ್ದಾರೆ. ಈಶ್ವರಪ್ಪ ಎಂದು ಆದೇಶದಲ್ಲಿ ಹೆಸರು ಇದೆಯೇ? ನೀವು ಯಾರ್ಯಾರನ್ನೋ ದಾರಿ ತಪ್ಪಿಸುತ್ತೀರಿ. ಆದರೆ ಸದನದ ದಾರಿ ತಪ್ಪಿಸುವುದಕ್ಕೆ ಹೋಗಬೇಡಿ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ. ತಮ್ಮ ಭಾಷಣ ಮುಗಿಸುವುದನ್ನೇ ಎಲ್ಲಾ ಶಾಸಕರೂ wait ಮಾಡುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ ; ಇನ್ನು ಎರಡೇ ನಿಮಿಷ ಸಾರ್.

ಅಧ್ಯಕ್ಷರು : ಬೇಗ ತಮ್ಮ ಭಾಷಣ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ ; ಇಷ್ಟೆಲ್ಲಾ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ನಿಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕೊನೆಯಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಈಶ್ವರಪ್ಪನವರು ಪ್ರಾಮಾಣಿಕರಾಗಿದ್ದಾರೆ. ಅವರ ಮೇಲೆ ಹತೋಟಿ ಇಡಬೇಕು ಎಂದು ಇದೆಲ್ಲಾ ಮಾಡುತ್ತಿದ್ದಾರೆಂದು ಈ ಪತ್ರದಿಂದ ಗೊತ್ತಾಗುತ್ತದೆ. ನಾಳೆ ಏನಾದರೂ ಮಾನ್ಯ ಈಶ್ವರಪ್ಪನವರು ರೇವಣ್ಣನ ಜೊತೆಗೋ ಅಥವಾ ಕುಮಾರ ಸ್ವಾಮಿ ಜೊತೆಗೋ ಹೋಗಿಬಿಟ್ಟಾರು ಎಂದು ಈ ರೀತಿ ಮಾಡಿದ್ದಾರೆ. ಅವರ ಅಡ್ರೆಸ್ ಸಮೇತ ಮಾಹಿತಿ ಕೊಡಿ ಎಂದು ಕೇಳಿದ್ದಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ರೇವಣ್ಣನವರು ಮಾನ್ಯ ಕುಮಾರ ಸ್ವಾಮಿಯವರಿಗೆ ಹೇಳಿ ಎಲ್ಲಾ ಮಂತ್ರಿಗಳನ್ನೂ ಹತೋಟಿಯಲ್ಲಿ ಇಟ್ಟುಕೊಂಡಿದ್ದರು. including ಸಭಾಧ್ಯಕ್ಷರು ಯಾರಿದ್ದರು. ಅವರನ್ನೂ ಸಹ ಹತೋಟಿಯಲ್ಲಿ ಇಟ್ಟುಕೊಂಡಿದ್ದರು. ನೀವು ಎಲ್ಲರನ್ನೂ ಹತೋಟಿಯಲ್ಲಿ ಇಟ್ಟುಕೊಂಡಿದ್ದೀರಿ. ನೀವು ಯಾರನ್ನು ಬಿಟ್ಟಿದ್ದೀರಿ?

(ಗೊಂದಲ)

ಅಧ್ಯಕ್ಷರು : ಮಾನ್ಯ ರೇವಣ್ಣನವರೆ. ಬೇಗ ಮುಗಿಸಿ

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ರೇವಣ್ಣನವರೆ. ಈಗಾಗಲೇ ಗಂಟೆ 3 ಆಯಿತು. ನಾವೆಲ್ಲಾ ಊಟಕ್ಕೆ ಹೋಗಬೇಕಾಗಿದೆ. ನೀವೇ ಊಟವನ್ನು ಕೊಡಿಸಿ ಬಿಡಿ.

(ಗೊಂದಲ)

ಅಧ್ಯಕ್ಷರು : ತಮ್ಮ ಭಾಷಣ conclude ಮಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಸಾರ್. ಒಂದೆರಡು ನಿಮಿಷದಲ್ಲಿ ಮುಗಿಸುತ್ತೇನೆ. ಮಾನ್ಯ ಈಶ್ವರಪ್ಪನವರು ಬಹಳ ಪ್ರಾಮಾಣಿಕರು. ಅವರು ಮಾಡುತ್ತಿರುವ ಕೆಲಸದ ಮೇಲೂ ನಿಗಾ ಇಟ್ಟಿದ್ದಾರೆ. ಸಭಾಧ್ಯಕ್ಷರಾಗಿರುವ ತಾವೂ ಕೂಡ ಮಂತ್ರಿಗಳಾಗುತ್ತೀರಿ ಎಂಬ ಆಸೆ ನಮಗಿತ್ತು. ತಾವು ಉಪ ಮುಖ್ಯಮಂತ್ರಿಗಳಾಗಿ ನಮಗೇನೋ ಕೆಲಸ ಮಾಡಿಕೊಡುತ್ತೀರಿ ಎಂಬ ಭಾವನೆ ನಮಗಿತ್ತು. ನಿಮ್ಮನ್ನೂ ಕೂಡ ಮೇಲೆ ಕೂರಿಸಿರುವುದರಿಂದ. ನಿಮ್ಮ ಕೆಲಸವೂ ಕೂಡ ಈಗ ಆಗದಂತಾಗಿದೆ. ಈಗ ಮಾನ್ಯ ಈಶ್ವರಪ್ಪನವರು ಒಬ್ಬರಿದ್ದಾರೆ. ಅವರ ಕಡೆಯಿಂದಲಾದರೂ ನಮ್ಮ ಕೆಲಸ ಆಗಲಿ ಎಂದರೆ. ಅದಕ್ಕೂ ಕಲ್ಲು ಹಾಕುವುದು ಬೇಡ.

ಅಧ್ಯಕ್ಷರು : Please. conclude ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ ; ಮಾನ್ಯ ಈಶ್ವರಪ್ಪನವರು ಒಳ್ಳೊಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ನಾವು ಅವರನ್ನು ಹೊಗಳಬೇಕಾಗುತ್ತದೆ. ಅವರು ಕಡತವೆಲ್ಲಾ ತೆಗೆಯಿರಿ ಎಂದು ಹೇಳುತ್ತಿದ್ದಾರೆ. ನಾನು ಇಷ್ಟೇ ಕೇಳಬಯಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ನವದೆಹಲಿಯಲ್ಲಿ ಪತ್ರಿಕಾ ಹೇಳಿಕೆಯೊಂದನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಗಂಟೆ 3.10 ಆಯಿತು. ದಯಮಾಡಿ ಬೇಗ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ ; ಇನ್ನು ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ. 3 ಗಂಟೆಯಿಂದ ಯಮಗಂಡ ಕಾಲ ಶುರುವಾಗುತ್ತಿದೆ. ಆ ಸಮಯದಲ್ಲಿ ನಾನು ಇನ್ನೂ ಹೇಳುವುದಿದೆ. ನಾನು ಇಷ್ಟೇ ಸರ್ಕಾರಕ್ಕೆ ಕೇಳುತ್ತೇನೆ. ವಿರೋಧ ಪಕ್ಷಗಳ ಸದಸ್ಯರನ್ನು ಧಮಕಿ ಹಾಕಿ ಹೆದರಿಸುವುದಕ್ಕೆ ಹೋಗುವುದು ಬೇಡ. ತನಿಖೆ

ಮಾಡುವುದಾದರೆ ಯಾವ ತರಹದ ತನಿಖೆ ಬೇಕಾದರೂ ಮಾಡಲಿ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಅವರ ಪ್ರಧಾನ ಕಾರ್ಯದರ್ಶಿಗಳ ಬಳಿ ಕಡತವಿಲ್ಲವೆಂದರೆ ನಾನು ಬೇಕಾದರೆ ಕಡತವನ್ನೂ ಕೂಡ ಕಳುಹಿಸಿಕೊಡುತ್ತೇನೆ. ಅದಕ್ಕೆ ನಾನೇನೂ ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಯಾವ್ಯಾವ ಇಲಾಖೆಯದು ತನಿಖೆ ಮಾಡುತ್ತಾರೋ ಮಾಡಲಿ. ಬೇಕಾದರೆ ರೇವಣ್ಣನದೊಂದೇ ಇಲಾಖೆಯದು ತನಿಖೆ ಮಾಡುವುದಾದರೆ ಮಾಡಲಿ. ಕುಮಾರ ಸ್ವಾಮಿ ಇಲಾಖೆಯದಾದರೂ ಮಾಡಲಿ ಅಥವಾ ಹಿಂದಿನ 20 ತಿಂಗಳ ಆಡಳಿತದ್ದು ಎಲ್ಲವನ್ನೂ ತನಿಖೆ ಮಾಡುವುದಾದರೆ ಮಾಡಲಿ. ಇದೆಲ್ಲಕ್ಕೂ ಬೇಕಾದರೆ ಎರಡೂ ಸದನದ ಸದಸ್ಯರನ್ನೊಳಗೊಂಡ ಸದನ ಸಮಿತಿಯೊಂದನ್ನು ಮಾಡಿ. ಸದನ ಸಮಿತಿಯ findings ಏನು ಬರುತ್ತದೋ. ಅದನ್ನು ಬೇಕಾದರೆ ಯಾವ ತನಿಖಾ ಆಯೋಗಕ್ಕೆ ಬೇಕಾದರೂ ಕಳುಹಿಸಲಿ. ನನ್ನದೇನು ಅಭ್ಯಂತರವಿಲ್ಲ. ಅದಕ್ಕೆ ನಾನೇನೂ ತಲೆ ಕೆಡಿಸಿಕೊಳ್ಳುವುದಿಲ್ಲ. ವಿರೋಧ ಪಕ್ಷಗಳ ಸದಸ್ಯರಿಗೆ ಸಂಬಂಧಿಸಿದ ಕೆಲವನ್ನು ತನಿಖೆಗೆ ಒಳಪಡಿಸುವುದಾಗಿ ಧಮಕಿ ಹಾಕುವುದು, ಅಧಿಕಾರಿಗಳಿಗೂ ಧಮಕಿ ಹಾಕುವುದು ಮತ್ತು ಹೆದರಿಸುವುದು. ಈ ಕಾರ್ಯಕ್ರಮಗಳೆಲ್ಲಾ ನಡೆಯುತ್ತಿವೆ. ಯಾವ ಅಧಿಕಾರಿ ತಪ್ಪು ಮಾಡಿದ್ದಾನೋ. ಅವನ ಮೇಲೆ ಬೇಕಾದರೆ ಕ್ರಮ ತೆಗೆದುಕೊಳ್ಳಲಿ. ಆದರೆ ಉದ್ದೇಶಪೂರ್ವಕವಾಗಿ ಆ ರೀತಿ ಮಾಡುವುದು ಸರಿಯಲ್ಲ. ಕೆಲವು ಹಿರಿಯ ಅಧಿಕಾರಿಗಳು ಇದ್ದಾರೆ. ಅವರು ಸ್ವಲ್ಪ ಕಡತ ತೆಗೆದು ನೋಡಲಿ. ಅದಕ್ಕಾಗಿ ಅವರು ಮಾನ್ಯ ಯಡಿಯೂರಪ್ಪನವರು ಮತ್ತು ಅವರ Principal Secretary ಯವರಿಂದ ಛೇಷ್ ಪಡೆದುಕೊಳ್ಳಲಿ. ನಾವು ಬೇಡ ಅನ್ನುವುದಿಲ್ಲ. ಕಾಲ ಹೀಗೆಯೇ ಇರುವುದಿಲ್ಲ. ಅದು ತಿರುಗುತ್ತಿರುತ್ತದೆ. ಕಾಲಚಕ್ರ ಒಂದೇ ಕಡೆ ಇರುವುದಿಲ್ಲ. ಅಧಿಕಾರವನ್ನು ಯಾರೂ ಕೂಡ ಹೊತ್ತುಕೊಂಡು ಕುಣಿಯುವುದಿಲ್ಲ. ಆದರೆ ಜನಸಾಮಾನ್ಯರ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದವರ ಮೇಲೆ. ಇವತ್ತು ವಿರೋಧ ಪಕ್ಷದಲ್ಲಿದ್ದೇವೆಂದು ನಮ್ಮನ್ನು ಹೆದರಿಸುತ್ತೇವೆ ಎನ್ನುವುದಾದರೆ. ಅದನ್ನು ಅವರು ಇಟ್ಟುಕೊಳ್ಳುವುದು ಬೇಡ. ಈಗಾಗಲೇ ನಮ್ಮ ಪಕ್ಷದಲ್ಲಿದ್ದ ಇಬ್ಬರನ್ನು ಮಂತ್ರಿಗಳನ್ನಾಗಿ ಮಾಡಿದ್ದೀರಿ. ಮಾನ್ಯ ಬಾಲಚಂದ್ರ ಜಾರಕಿಹೋಳಿಯವರಿಗೆ 32 ಕೋಟಿ ರೂ.ಗಳ ಸಾಲವಿತ್ತು. ಅದನ್ನು ಇಟ್ಟುಕೊಂಡು ಅವರನ್ನು ಯಾವ ರೀತಿ ಹೆದರಿಸಿ ಧಮಕಿ ಹಾಕಿದಿರಿ ಎಂಬುದು ನನಗೆ ಗೊತ್ತು. ನಮ್ಮ ಪಕ್ಷದಲ್ಲಿದ್ದ ಇನ್ನೊಬ್ಬ ಸದಸ್ಯರಾದ ಶಿವನಗೌಡರನ್ನೂ ಮಂತ್ರಿಗಳನ್ನಾಗಿ ಮಾಡಿದ್ದೀರಿ. ವಿರೋಧ ಪಕ್ಷದಲ್ಲಿದ್ದರೆ ಕೆಲಸವಾಗುವುದಿಲ್ಲ. ಆದ್ದರಿಂದ ಆಡಳಿತ ಪಕ್ಷಕ್ಕೆ ಸೇರಿದೆ ಎಂದು ಅವರು ಹೇಳಿದ್ದಾರೆ.

ದೊಡ್ಡಬಳ್ಳಾಪುರದ ಮಾಜಿ ಶಾಸಕ ನರಸಿಂಹಸ್ವಾಮಿಯವರೂ ಕೂಡ ಅದೇ ಮಾತನ್ನು ಹೇಳಿದ್ದಾರೆ. ನಮ್ಮ ಕ್ಷೇತ್ರಕ್ಕೆ 50 ಕೋಟಿ ರೂ.ಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟರು ಎಂದು ಹೇಳಿದ್ದಾರೆ. ಹಾಗಾದರೆ ವಿರೋಧ ಪಕ್ಷದಲ್ಲಿರುವ ಸದನದ ಸದಸ್ಯರು. ಯಾರಿಗೆಲ್ಲಾ ನೀವು ದುಡ್ಡು ಕೊಡುತ್ತೀರೋ. ಅವರೆಲ್ಲಾ ನಿಮ್ಮ ಪಾರ್ಟಿ ಸೇರಿಕೊಳ್ಳಬೇಕೇ? " 10 ಕೋಟಿ ರೂ.ಗಳನ್ನು ಕೊಡುತ್ತೇವೆ. 20 ಕೋಟಿ ರೂ.ಗಳನ್ನು ಕೊಡುತ್ತೇವೆ. 50 ಕೋಟಿ ರೂ.ಗಳನ್ನು ಕೊಡುತ್ತೇವೆ. ನಿಮ್ಮ ಕೆಲಸ ಮಾಡಿಕೊಡುತ್ತೇವೆ" ಎನ್ನುವುದಾದರೆ ಹೇಗೆ? ಆ ದುಡ್ಡು ಎಲ್ಲಿಂದ ಬಂತು? ಅದು 10 ಜನರ ದುಡ್ಡೇ ಅಥವಾ ಯಾರಾರದರೂ ಒಬ್ಬರಿಂದ ಬಂದಿದೆಯೇ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದ ಮೇಲಿನ ಚರ್ಚೆಗೆ ಉತ್ತರ ಕೊಡುವ ಸಂದರ್ಭದಲ್ಲಿ ಸಾರ್ವಜನಿಕರಿಗೆ ತಿಳಿಸಬೇಕಾಗುತ್ತದೆ. ಕೆಲವು ಹಿರಿಯ ಅಧಿಕಾರಿಗಳನ್ನು ಇಟ್ಟುಕೊಂಡು ಹೆದರಿಸುವುದು ಮಾಡುತ್ತಿದ್ದೀರಿ. ನಮಗೂ ಗೊತ್ತಿದೆ. ನಾವು ಎಲ್ಲಾ ತರಹದಕ್ಕೂ ರೆಡಿ ಇದ್ದೇವೆ. ಇಂತಹ ಗೊಡ್ಡು ಬೆದರಿಕೆಗಳಿಗೆ ಹೆದರಿಕೊಂಡು ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡುವುದಕ್ಕಾಗುವುದಿಲ್ಲ. ನಾವು ಈ ಸರ್ಕಾರಕ್ಕೆ ಹೆದರುವುದಿಲ್ಲ. ಎಳೆ ಎಳೆಯಾಗಿ ಬಿಡಿಸುವಂತಹ ಕಾಲ ಬರುತ್ತದೆ. ಆಗ ಬಿಡಿಸುತ್ತೇವೆ. ಸರ್ಕಾರದ ಇತಿಮಿತಿಯಲ್ಲಿ ಅವರು ಕೆಲಸ ಮಾಡಲಿ. ಕಾನೂನು ವ್ಯಾಪ್ತಿಯಲ್ಲಿ ಯಾವ ತರಹದ ಕ್ರಮ ಬೇಕಾದರೂ ತೆಗೆದುಕೊಳ್ಳಲಿ. ಅದು ಕುಮಾರಸ್ವಾಮಿ ಮಾಡಿರಲಿ. ರೇವಣ್ಣ ಮಾಡಿರಲಿ. ತಾಕತ್ತಿದ್ದರೆ. including Deputy CM. Finance Minister ಕೂಡ ಆಗಿದ್ದರಲ್ಲ. ಅವರು ಏನೇನು ಮಾಡಿದ್ದಾರೆಂದು ಹೇಳಲಿ. ಮಾಡುವುದಕ್ಕೆ ತಾಕತ್ತು ಇದೆಯೇ ಕೇಳಿ. ನಾನು ಲೋಕೋಪಯೋಗಿ ಮಂತ್ರಿಯಾಗಿದ್ದೆ. ನಾನು ರೆಡಿಯಾಗಿದ್ದೇನೆ. ಅವರು ಸದನ ಸಮಿತಿಯನ್ನು ಎದುರಿಸುತ್ತಾರೆಯೇ ಕೇಳಿ. ನಾನು ಈ ಮಾತನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇನೆಂದು ಹೊರಟಿದ್ದಾರಲ್ಲಾ. ಅವರಿಗೆ ತಾಕತ್ತಿದ್ದರೆ ಅದನ್ನು ಮಾಡಲಿಕ್ಕೆ ಹೇಳಿ. ಅವರು ಮತ್ತು ಮಾನ್ಯ ಉದಾಸಿಯವರು ಇಬ್ಬರೂ ಸೇರಿ. ನಿಮ್ಮ Principal Secretaryಯವರನ್ನು ಇಟ್ಟುಕೊಂಡು ಹೆದರಿಸುತ್ತಿದ್ದೀರಲ್ಲಾ. ತಾಕತ್ತಿದ್ದರೆ ತನಿಖೆ ಮಾಡಿ. ನಾನು ರೆಡಿ ಇದ್ದೇನೆ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ : ಏಕೆ ಅವರು ಆವೇಶಕ್ಕೆ ಒಳಗಾಗುತ್ತಿದ್ದಾರೋ ನನಗೆ ಗೊತ್ತಿಲ್ಲ. ಅವರು ನನ್ನ ಹೆಸರು ಪ್ರಸ್ತಾಪಿಸಿದ್ದನ್ನು ನೋಡಿದರೆ. ಅವರಿಗೆ ಪಾಪ ಪ್ರಜ್ಞೆ ಕಾಡುತ್ತಿದೆ ಎಂದು ನಾನು ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ ; ನನಗೆ ಯಾವುದೇ ಭಯ ಇಲ್ಲ...

(ಗೊಂದಲ)

ಶ್ರೀ ಸಿ.ಎಂ. ಉದಾಸಿ : ನಾನು ಏನನ್ನೂ ಹೇಳಿಯೇ ಇಲ್ಲ. ಆದರೂ ನೀವು ನನ್ನ ಹೆಸರನ್ನು ಪ್ರಸ್ತಾಪಿಸಿದ್ದೀರಿ. ಆದ್ದರಿಂದ ನೀವು ಏನೋ ಮಾಡಿರುವಂತಹ ಪಾಪ ಪ್ರಜ್ಞೆ ನಿಮ್ಮನ್ನು ಕಾಡುತ್ತಿದೆ ಎನಿಸುತ್ತದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ ; ನಾನೇನೂ ಪಾಪ ಮಾಡಿಲ್ಲ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ : ನನ್ನ ಹೆಸರನ್ನು ಪ್ರಸ್ತಾಪಿಸಿರುವುದರಿಂದ ನಾನು ಆ ಮಾತನ್ನು ಹೇಳಲೇಬೇಕಾಗುತ್ತದೆ. ತನಿಖೆ ನಡೆಸುತ್ತೇನೆಂದು ನಾನು ಎಲ್ಲಿಯಾದರೂ ಹೇಳಿದ್ದರೆ ಹೇಳಲಿ. ನಾನು ಯಾವುದಾದರೂ ಪತ್ರಿಕೆಯಲ್ಲಿ ಹೇಳಿದ್ದರೆ. ಅದನ್ನು ಅವು ಹೇಳಬೇಕಲ್ಲವೇ? ನೀವು ಸುಮ್ಮನೆ ಏನೋ ಮಾತನಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : ನಿಮ್ಮ ಭಾಷಣ conclude ಮಾಡಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ; ಸನ್ಮಾನ್ಯ ಅಧ್ಯಕ್ಷರೆ. ಅವರು ನಿರಾಧಾರವಾಗಿ ಆರೋಪಗಳನ್ನು ಮಾಡುವುದು ಬೇಡ. ಅದಕ್ಕೆ ಏನಾದರೂ ಆಧಾರ ಇದ್ದರೆ. ಆ ಸಾಕ್ಷ್ಯಾಧಾರಗಳನ್ನು ಅವರು ತಮಗೆ ಒದಗಿಸಲಿ. ಯಾವ ಶಾಸಕರಿಗೆ ಹಣವನ್ನು ಕೊಟ್ಟಿದ್ದಾರೆ ಎಂಬುದನ್ನು ಅವರು ರುಜುವಾತು ಮಾಡಲಿ. ಯಾರಿಗೆ ಧಮಕಿ ಹಾಕಿದ್ದಾರೆ ಎಂಬುದನ್ನು ಅವರು ರುಜುವಾತು ಮಾಡಲಿ. ಯಾರದೋ ಅಧಿಕಾರಿಗಳ ಮುಖಾಂತರ ಇವರು ಮಾನ್ಯ ಮುಖ್ಯಮಂತ್ರಿಗಳ ಮೇಲೆ ಆರೋಪ ಮಾಡುವುದು ಸಲ್ಲದು. ಏನಾದರೂ ಆಧಾರವಿದ್ದರೆ. ಆ ಆಧಾರಗಳನ್ನು ಅವರು ತಮಗೆ ಕಳುಹಿಸಿಕೊಡಲಿ. ತಾವು ಅದನ್ನು ಪರಿಶೀಲನೆ ಮಾಡಿ. ಈ ರೀತಿ ಧಮಕಿ ಹಾಕಿದ್ದಾರೆ. ಅಧಿಕಾರಿಗಳನ್ನಿಟ್ಟುಕೊಂಡು ಧಮಕಿ ಹಾಕುತ್ತಿದ್ದಾರೆ. ಶಾಸಕರಿಗೆ 30–50 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಎಂದು ನಿರಾಧಾರವಾಗಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಾನು 30–40 ಕೋಟಿ ರೂ.ಗಳ ದುಡ್ಡನ್ನು ಕೊಟ್ಟು ಅವರ ಪಕ್ಷಕ್ಕೆ ಎಳೆಯುತ್ತಿದ್ದಾರೆಂದು ನಾನು ಹೇಳಿಲ್ಲ. ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿಕೊಡುತ್ತೇವೆಂದು ಹೇಳಿದ್ದಾರೆಂದು ನಾನು ಹೇಳಿದ್ದೇನೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಅದಕ್ಕೇನು ಆಧಾರವಿದೆ?..

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ ; ಅದು ಪತ್ರಿಕೆಗಳಲ್ಲಿ ಬಂದಿದೆ. ದೊಡ್ಡಬಳ್ಳಾಪುರದ ಮಾಜಿ ಶಾಸಕರು ಆ ರೀತಿ ಹೇಳಿದ್ದಾರೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ; ನೀವು ನಿರಾಧಾರವಾಗಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ಬಾಲಕೃಷ್ಣರವರೆ. ನೀವು ಏಕೆ ಮಧ್ಯೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ ; 50 ಕೋಟಿ ರೂ.ಗಳನ್ನು ದೊಡ್ಡಬಳ್ಳಾಪುರಕ್ಕೆ ಕೊಡುತ್ತೇವೆಂದು ಹೇಳಿದರು. ಆದ್ದರಿಂದಲೇ ನಾನು ಪಕ್ಷಾಂತರ ಮಾಡುತ್ತಿದ್ದೇನೆ ಎಂದು ಮಾನ್ಯ ನರಸಿಂಹಸ್ವಾಮಿಯವರು ಹೇಳಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ ; ಮಾನ್ಯ ಅಧ್ಯಕ್ಷರೆ, ಈ ವೇದಿಕೆಯನ್ನು ದುರುಪಯೋಗ ಮಾಡಿಕೊಂಡು ದಯವಿಟ್ಟು ರಾಜಕಾರಣ ಮಾಡುವುದು ಒಳ್ಳೆಯದಲ್ಲ. ಮೊದಲನೆಯದಾಗಿ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು. ಧಮಕಿ ಹಾಕಿ ನಮ್ಮನ್ನು ಹೆದರಿಸುವಂತಹ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಹೇಳುತ್ತಿದ್ದೀರಿ. ಎರಡನೆಯದಾಗಿ. ಮಾನ್ಯ ಬಾಲಚಂದ್ರ ಜಾರಕಿಹೊಳಿಯವರು 32 ಕೋಟಿಯೋ ಅಥವಾ 38 ಕೋಟಿ ರೂಪಾಯಿಗಳದೋ ಸಾಲ ಇತ್ತು. ಅದರ ಬಗ್ಗೆ ಪ್ರಸ್ತಾಪ

ಮಾಡಿದ್ದಾರೆ. ಮೂರನೆಯದಾಗಿ ಮಾನ್ಯ ಶಿವನಗೌಡರ ಬಗ್ಗೆ ಮತ್ತು ಮಾನ್ಯ ನರಸಿಂಹಸ್ವಾಮಿಯವರು ಹೇಳಿದ್ದರ ಬಗ್ಗೆ ಅವರು ಪ್ರಸ್ತಾಪಿಸಿದ್ದಾರೆ. ವ್ಯಕ್ತಿಯೊಬ್ಬರ ಬಗ್ಗೆ ಆರೋಪ ಮಾಡುವಂತಹ ಸಂದರ್ಭದಲ್ಲಿ. ಆ ಬಗ್ಗೆ ಅವರು ಮಾನ್ಯ ಅಧ್ಯಕ್ಷರಾದ ತಮಗೆ ಮೊದಲೇ ನೋಟಿಸ್ ಕೊಡಬೇಕಾಗುತ್ತದೆ. ಡಾಕ್ಯುಮೆಂಟ್ಸ್‌ನ್ನು ರಿಡಿರಜಣ್ಣಜಿ ಮಾಡಬೇಕು. ಅದನ್ನು ಬಿಟ್ಟು ನೇರವಾಗಿ ರಾಜಕಾರಣ ಮಾಡಲು ಈ ವೇದಿಕೆಯನ್ನು ದುರುಪಯೋಗ ಮಾಡಿಕೊಳ್ಳಬೇಡಿ. ಇದು ಒಳ್ಳೆಯದಲ್ಲ. ಏಕೆಂದರೆ. ನೀವು ಇದನ್ನು ಆರಂಭ ಮಾಡಿದಾಕ್ಷಣ ಇನ್ನೊಬ್ಬರು ಆರಂಭ ಮಾಡುತ್ತಾರೆ. ದಯವಿಟ್ಟು ಬೇಡ. ಇಷ್ಟು ಹೊತ್ತು ತುಂಬಾ ಚೆನ್ನಾಗಿ ಸಲಹೆಗಳನ್ನು ಕೊಟ್ಟಿದ್ದೀರಿ. ಇಷ್ಟು ಹೊತ್ತು ನಮ್ಮ ಇಲಾಖೆಗಳ ಬಗ್ಗೆ ಏನೇನು ಸಲಹೆಗಳನ್ನು ಕೊಟ್ಟಿದ್ದೀರಿ. ಅವರಿಗೆ ಅನುಭವವಿದೆ. ನಾವು ಅರ್ಥ ಮಾಡಿಕೊಂಡಿದ್ದೇವೆ. ಅದನ್ನು ನಾವು ತೆಗೆದುಕೊಳ್ಳುತ್ತೇವೆ. ಇನ್ನು ಅದನ್ನು ನಾವು ಅನುಕೂಲವಾಗಿ ಮಾಡಿಕೊಳ್ಳುತ್ತೇವೆ. ಆದರೆ ಕೊನೆಯಲ್ಲಿ ಮುಗಿಸುವಂಥ ಸಂದರ್ಭದಲ್ಲಿ ಈ ರೀತಿ ಮುಖ್ಯಮಂತ್ರಿಗಳ ಮೇಲೆ ಶಾಸಕರ ಮೇಲೆ ಅದೇ ರೀತಿಯಾಗಿ ಅಧಿಕಾರಿಗಳ ಮೇಲೆ ನೇರ ಆರೋಪ ಮಾಡಿಕೊಂಡು ಹೋಗುತ್ತಿರುವುದು ಅಷ್ಟೊಂದು ದಯವಿಟ್ಟು ಒಳ್ಳೆಯದಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಅಬಕಾರಿ ಮಂತ್ರಿಗಳು) ; ಅಧ್ಯಕ್ಷರೆ. ಅದನ್ನು ಕಡತದಿಂದ ತೆಗೆಸಿಹಾಕಬೇಕು.

ಅಧ್ಯಕ್ಷರು ; ನೋಡಿ. ಯಾವುದು ಸರಿ ಇದೆ. ತಪ್ಪಿದೆ ಎಂಬುದನ್ನು ಕಡತವನ್ನು ತರಿಸಿ ನಾನು ಸರಿ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ ; ಮಾನ್ಯ ಅಧ್ಯಕ್ಷರೆ. ನನಗೆ ಅಬಕಾರಿ ಮಂತ್ರಿಗಳಾದ ಸುಬ್ರಹ್ಮಣ್ಯ ನಾಯ್ಡು ರೀತಿ ಪೇಪರ್ ಓದಲು ಬರುವುದಿಲ್ಲ. ಅಷ್ಟು ಪೇಪರ್ ಓದುವ ಅಭ್ಯಾಸವಿಲ್ಲ. ನವದೆಹಲಿಯಲ್ಲಿ ಮುಖ್ಯಮಂತ್ರಿಗಳೇ ಮಾಜಿ ಮುಖ್ಯಮಂತ್ರಿಗಳಾದ ಕುಮಾರ ಸ್ವಾಮಿಯವರ ಕಾಲದಲ್ಲಿ ಏನೇನಾಗಿದೆ. ಆ ಬಗ್ಗೆ ತನಿಖೆ ಮಾಡಿಸುತ್ತೇವೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಸ್ವಾಗತ ಮಾಡುತ್ತಿದ್ದೇನೆ. ತಪ್ಪೇ? ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿರುವುದನ್ನು ಸ್ವಾಗತ ಮಾಡುತ್ತೇವೆ. ಅದೇ ರೀತಿ. ಅವರು ಉಪ ಮುಖ್ಯಮಂತ್ರಿಗಳಾಗಿದ್ದರಲ್ಲ. ಅವರು ತನಿಖೆಗೆ ರೆಡಿ ಇದ್ದಾರ ಎಂದು ಕೇಳಿದೆ ಅಷ್ಟೆ. ಅವರು ನೀವೆಲ್ಲಾ ಪ್ರಾಮಾಣಿಕರು. ಸರ್. ನಿಮ್ಮಷ್ಟು (ಕಟ್ಟಾ ಸುಬ್ರಹ್ಮಣ್ಯ ನಾಯ್ಡು) ಪ್ರಾಮಾಣಿಕರು ಯಾರೂ ಇಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ; 50 ಕೋಟಿ. 30 ಕೋಟಿ. ಉನ್ನತ

ಅಧಿಕಾರಿಗಳೆಂದೆಲ್ಲಾ ಉಲ್ಲೇಖ ಮಾಡುತ್ತಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ ; ನೀವು ಏತಕ್ಕೆ ಹೆದರಿಕೊಳ್ಳುತ್ತಿದ್ದೀರಿ. ಪ್ರಾಮಾಣಿಕರಾದ ಮೇಲೆ ಏತಕ್ಕೆ ಹೆದರಿಕೊಳ್ಳಬೇಕು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಹೆದರಿಕೊಳ್ಳುವ ಪ್ರಶ್ನೆಯೇ ಇಲ್ಲ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು): ಏತಕ್ಕೆ ಹೆದರಿಕೊಳ್ಳಬೇಕು. ಈ ಕಡೆಯವರ್ಯಾರು ಹೆದರಿಕೊಂಡಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ ' ಉದಾಸಿಯವರು ಏತಕ್ಕೆ ಹೆದರಿಕೊಳ್ಳುತ್ತಾರೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಸಿ.ಎಂ. ಉದಾಸಿ : ನಾವು ಹೆದರಿಕೊಂಡಿಲ್ಲ. ಹೆದರಿಕೊಂಡವರು ನೀವು. ನಾವ್ಯಾಕೆ ಹೆದರಿಕೊಳ್ಳಲಿ (ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ ; ನನ್ನ ಜೀವಮಾನದಲ್ಲೇ ಹೆದರಿಕೆ. ಭಯ ಇಲ್ಲ. ಮಾನ್ಯ ಉದಾಸಿಯವರೆ. ನೀವು ರಾಮಕೃಷ್ಣ ಹೆಗ್ಡೆಯವರ ಕಾಲದಲ್ಲೂ ಮಂತ್ರಿಗಳಾಗಿದ್ದೀರಿ. ನನ್ನ ಮೇಲೆ ಲೋಕಾಯುಕ್ತ ಸಿಓಡಿ ತನಿಖೆ ಮಾಡಿ ಏನಾಯಿತು? ದಯವಿಟ್ಟು ಒಂದು ನಿಮಿಷ ತಾಳ್ಮೆಯಿಂದಿರಿ. ನಾನು ಯಾವುದೇ ಹೆದರಿಕೆ ಬೆದರಿಕೆಗೆ ಹೋಗುವುದಿಲ್ಲ. ನಾನು ಹೇಳುವುದು ನನ್ನದಿದ್ದರೆ. ನೀವೇ ಲೋಕೋಪಯೋಗಿ ಮಂತ್ರಿಗಳಿದ್ದೀರಿ. ತಾಕತ್ತಿದ್ದರೆ ತನಿಖೆ ಮಾಡಿಸಿ. ನಾನೇನು ಹೆದರಿಕೊಂಡು ನಿಮ್ಮ ಹತ್ತಿರ ಸಲಾಂ ಮಾಡಲು ಬಂದಿಲ್ಲ... (ಗೊಂದಲ)

ಅಧ್ಯಕ್ಷರು ; ರೇವಣ್ಣನವರೆ. ಇಷ್ಟು ಹೊತ್ತು ಚೆನ್ನಾಗಿ ಮಾತನಾಡಿದಿರಿ. ಕೊನೆಯಲ್ಲಿ ಹೀಗೇಕೆ ಹೇಳಿತ್ತಿದ್ದೀರಿ?

ಶ್ರೀ ಡಿ.ಎನ್. ಜೀವರಾಜ್ : ಅಧ್ಯಕ್ಷರೆ, ರೇವಣ್ಣನವರಿಗೆ ಹಸಿವಾಗಿದೆ. ಊಟಕ್ಕೆ ಬಿಡುವುದಕ್ಕೆ ಹೇಳಿ (ಗೊಂದಲ)

ಮಾನ್ಯ ಸದಸ್ಯರೊಬ್ಬರು : ಮಾನ್ಯ ರೇವಣ್ಣನವರು ಸವಾಲು ಹಾಕುವುದು ಸರಿಯಲ್ಲ. ಮಾತು ಮಾತಿಗೂ ತಾಕತ್ತೆಂದು ಹೇಳುತ್ತಾರೆ. ಬಹುಶಃ ಅವರ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕೆ ಈ ರೀತಿ ಮಾತನಾಡುತ್ತಿದ್ದಾರೆ.

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ : ರೇವಣ್ಣನವರು 50 ಕೋಟಿ. 30 ಕೋಟಿ ಎಂದು ಹೇಳಿದ್ದು. ವೈಯಕ್ತಿಕವಾಗಿ ಕೊಡುತ್ತಿದ್ದಾರೆಂದಲ್ಲ. ಅವರು ಬಳಸಿರುವುದು ಸರ್ಕಾರದಿಂದ ನಿಮ್ಮ ಕ್ಷೇತ್ರಗಳಿಗೆ ಎಲ್ಲಾ ರೀತಿಯ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಡುತ್ತೇವೆ. ನಿಮ್ಮ ಕ್ಷೇತ್ರಕ್ಕೆ 50 ಕೋಟಿ ರೂಪಾಯಿಗಳ ಕೆಲಸ ಮಾಡಿಕೊಡುತ್ತೇವೆಂದು ಹೇಳಿ ನನಗೆ ಸನ್ಮಾನ್ಯ ಮುಖ್ಯಮಂತ್ರಿಗಳು ದೇವನಹಳ್ಳಿಯ ಕಾರ್ಯಕ್ರಮಕ್ಕೆ ಬಂದಾಗ ಭರವಸೆಯನ್ನು ಕೊಟ್ಟರು. ನನ್ನ ಕ್ಷೇತ್ರ ಅಭಿವೃದ್ಧಿಯಾಗಬೇಕು. ನಾನು ಕಳೆದ 2–3 ಅವಧಿಯಲ್ಲಿ ಶಾಸಕನಾಗಿ ಏನು ಕೆಲಸ ಮಾಡಿದ್ದೇನೆ. ಆ ದೃಷ್ಟಿಯಿಂದ ಮುಖ್ಯಮಂತ್ರಿಗಳೇನು ಭರವಸೆಯನ್ನು ಕೊಟ್ಟರು. ನಾನು ನನ್ನ ಕ್ಷೇತ್ರದ ಅಭಿವೃದ್ಧಿಯ ಸಲುವಾಗಿ ನಾನು ಆ ಪಕ್ಷಕ್ಕೆ ಸೇರುತ್ತಿದ್ದೇನೆ ಎಂದು ಏನು ಹೇಳಿದ್ದಾರೆ. ಆ ವಿಷಯವನ್ನು ರೇವಣ್ಣನವರು ಪ್ರಸ್ತಾಪ ಮಾಡಿದರು. ನೀವು ಸರ್ಕಾರದ ಹಣದಿಂದ ಇವತ್ತು ವಿರೋಧಪಕ್ಷದ ಶಾಸಕರುಗಳಿಗೆ ನಿಮ್ಮ ಕ್ಷೇತ್ರಗಳ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಡುತ್ತೇವೆ ನಮ್ಮ ಪಕ್ಷಕ್ಕೆ ಬನ್ನಿ ಎಂದು ಅವರ ಮೇಲೆ ಒತ್ತಡವನ್ನು ತಂದಿದ್ದೀರೆನ್ನುವ ಮಾತನ್ನು ಹೇಳಿದ್ದಾರಷ್ಟೆ. ವೈಯಕ್ತಿಕವಾಗಿ ಯಾವುದೇ ರೀತಿಯಾಗಿ ಅರ್ಥ ಮಾಡಿಕೊಳ್ಳಬಾರದು.

ಅಧ್ಯಕ್ಷರು ; ಆಯಿತು. ರೇವಣ್ಣನವರೆ. ದಯವಿಟ್ಟು ಮುಗಿಸಿ. ನೀವು ಸಾಮಾನ್ಯವಾಗಿ ಮಾತನಾಡುವಾಗ ಚೆನ್ನಾಗಿ ಮಾತನಾಡುತ್ತೀರಿ. ಆವೇಶದಿಂದ ಮಾತನಾಡುವಾಗ ದಾರಿ ತಪ್ಪಿಸುತ್ತೀರಿ.

ಶ್ರೀ ಹೆಚ್.ಡಿ. ರೇವಣ್ಣ ; ಉದಾಸಿಯವರು ಒಂದೇ ಸಾರಿ ಗಾಬರಿಯಾಗುತ್ತಾರೆ. ನನಗೆ ಅವರಷ್ಟು ಅನುಭವವಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೆ. ಎಲ್ಲಾ ಕಡೆ ಅಣ್ಣ ತಮ್ಮನನ್ನು ದಾರಿಗೆ ತಂದಿದ್ದನ್ನು ನೋಡಿದ್ದೇವೆ. ಇದು ಉಲ್ಟಾ, ನೋಡಿ ಕುಮಾರಸ್ವಾಮಿಯವರು ಬಹಳ ಸರಿಯಾಗಿ ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ ; ಅಧ್ಯಕ್ಷರೆ. ಅವರಿಗೆ ಏನಾಗಿದೆ ಎಂದರೆ. ಅವರು ಎಲ್ಲರನ್ನು ದಾರಿತಪ್ಪಿಸುತ್ತೇವೆಂದು ರೇವಣ್ಣನವರನ್ನು ದಾರಿತಪ್ಪಿಸುವುದಕ್ಕೆ ಅವರಿಗಾಗುತ್ತಿಲ್ಲ. ಅದನ್ನು ಅವರು ತಿಳಿದುಕೊಳ್ಳುವುದಕ್ಕೆ ಹೇಳಿ. ನಾನೇನು ದಾರಿ ತಪ್ಪುವ ಹಂತದಲ್ಲಿಲ್ಲ.

ಅಧ್ಯಕ್ಷರು : ರೇವಣ್ಣನವರೆ, ಮೂರುವರೆಯಾಯಿತು ಸಾಕು ಇನ್ನು ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ ; ಅಧ್ಯಕ್ಷರೆ. ನನಗೆ ಮುಗಿಸಲು ಬಿಡುತ್ತಿಲ್ಲ. ಟೈಮ್ ಎಷ್ಟಾಗಿದೆ?

ಶ್ರೀ ಸಿ.ಟಿ. ರವಿ ;ಅಧ್ಯಕ್ಷರೆ. ರೇವಣ್ಣನವರು ವಾಚ್ ಕಟ್ಟಿಲ್ಲ. 2 ನಿಮಿಷವೆಂದರೆ ಅವರಿಗೆ ಎಷ್ಟು ಗಂಟೆ ಎಂದು ಕೇಳಬೇಕು.

ಶ್ರೀ ಬಾಲಕೃಷ್ಣ ; ಮಾನ್ಯ ಅಧ್ಯಕ್ಷರೆ. ಸರಿಯಾದ ಸಮಯದಲ್ಲಿ ಮಾತನಾಡಲು ಪ್ರಾರಂಭ ಮಾಡಲು ನೀವೂ ಅವಕಾಶ ಕೊಟ್ಟಿಲ್ಲ. ಟೈಂ ನೋಡಿ ನೀವು ಮಾತನಾಡಲು ಅವಕಾಶ ಕೊಟ್ಟಿದ್ದರೆ ಇದಾಗುತ್ತಿರಲಿಲ್ಲ.

ಅಧ್ಯಕ್ಷರು ; ಇನ್ನು ಮೂರುವರೆಗೆ ರಾಹುಕಾಲ ಪ್ರಾರಂಭವಾಗುತ್ತದೆ. ಸಾಕು ಮುಗಿಸಿ.

ಶ್ರೀ ಸಿ.ಟಿ. ರವಿ : ಅಧ್ಯಕ್ಷರೆ. ಅವರು ಗುಳಿಕಕಾಲದಲ್ಲಿ ಆರಂಭ ಮಾಡಿದ್ದಾರೆ. ಗಳಿಗೆ ನೋಡಿ ಯಾವಾಗ ನಿಲ್ಲಿಸಬೇಕೆಂದು ನೋಡಿಕೊಂಡೇ ಬಂದಿದ್ದಾರೆ. ಆ ಗಳಿಗೆ ಬರುವವರೆಗೂ ನಿಲ್ಲಿಸುವುದಿಲ್ಲ. ಅಲ್ಲಿಯವರೆಗೆ ಕಾಯಲೇ ಬೇಕು.

ಶ್ರೀ ಹೆಚ್.ಡಿ. ರೇವಣ್ಣ ; ಅಧ್ಯಕ್ಷರೆ. ಅದಕ್ಕೆ ನಾನು ಮೂರು ಗಂಟೆಗೆ ಯಮಗಂಡ ಕಾಲ ಶುರುವಾಗುತ್ತದೆ. ಸೋಮವಾರದವರೆಗೂ ಮುಂದೂಡಿ ಎಂದು ಹೇಳಿದೆ. ಏಕೆಂದರೆ. ಇವತ್ತು ರವಿಯವರು ಬಟ್ಟೆ ಬದಲಾಯಿಸಿಕೊಂಡು ಬಂದಿದ್ದಾರೆ. ಅವರು ಕಾವಿ ಹಾಕಿಕೊಂಡಾಗ ಚೆನ್ನಾಗಿ ಮಾತನಾಡುತ್ತಾರೆ. ಬೇರೆ ಬಟ್ಟೆ ಹಾಕಿದಾಗ ಸರಿಯಾಗಿ ಮಾತನಾಡುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳೇ ಹೇಳಿಕೆಯನ್ನು ಕೊಟ್ಟಿರುವುದರಿಂದ. ನಾವು ವಿರೋಧ ಪಕ್ಷದಲ್ಲಿದ್ದೇವೆ ಯಾವ ರೀತಿಯಾದರೂ ಮಾಡಿ. ಆದರೆ ತನಿಖೆ ಒಬ್ಬರಿಗೆ ಸೀಮಿತವಾಗಿರುತ್ತದೆಯೋ ಅಥವಾ ಎಲ್ಲರಿಗೂ ಅನ್ವಯಿಸುತ್ತದೆಯೋ ಎಂಬ ಬಗ್ಗೆ ನಾನು ಉತ್ತರವನ್ನು ಬಯಸುತ್ತಿದ್ದೇನೆ. ಏಕೆ ಅನುಮಾನ. ನೀವೆಲ್ಲಾ ಪ್ರಾಮಾಣಿಕವಾಗಿರುವವರೆಲ್ಲಾ ಭ್ರಷ್ಟಾಚಾರ ರಹಿತವಾಗಿರುವವರು ಏಕೆ ಹೆದರಬೇಕು? ತಾಕತ್ತಿದ್ದರೆ 20 ತಿಂಗಳದ್ದು ಎಲ್ಲರದನ್ನು ತನಿಖೆ ಮಾಡಿ ಎಂದು ಹೇಳಿ. ನಾನು ರೆಡಿ ಇದ್ದೀನಪ್ಪ. ನೀವು ಎಲ್ಲರಿಗೂ ಹೇಳಿ. ಅಧ್ಯಕ್ಷರೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದನೆಗಳು. ನಾಡಿದ್ದು ಬಜೆಟ್ ಡಿಸ್ಕಷನ್‌ಗೆ ಬರುವಾಗ ನನಗೆ ಮಾತನಾಡಲು ಇನ್ನೊಂದು ಗಂಟೆ ಕಾಲಾವಕಾಶ ಕೊಡಿ.